# ನದಿ ನೀರಿನ ಹಂಚಿಕೆ ವಿವಾದಗಳು : ರಾಷ್ಟ್ರೀಯ ನದಿಗಳ ಜಾಲ – ಒಂದು ಪಕ್ಷಿ ನೋಟ

**-ಎನ್. ಶಂಕರಪ್ಪ ತೋರಣಗಲ್ಲು , ಬಿ.ಇ. (ಸಿವಿಲ್) ., ಎಂ.ಇ (ರಚನೆಗಳು)**

( River Basin = ಜಲಾನಯನ , ನದಿ ಪಾತ್ರ , Intra Basin Linking= ಪಾತ್ರಾಂತರಿಕ ಜೋಡಣೆ , Inter Basin Linking = ಪಾತ್ರಾಂತರ ಜೋಡಣೆ , Inter Basin Transfer = ಪಾತ್ರಾಂತರ ವರ್ಗಾವಣೆ)

೧ ಟಿ.ಎಂ.ಸಿ = (೧೦೦೦ x ೧೦೦೦ x ೧೦೦೦) ಘನ ಅಡಿ ಸಂಗ್ರಹ ,

೧ ಬಿ.ಸಿ.ಎಂ = (೧೦೦೦ x ೧೦೦೦ x ೧೦೦೦) ಘನ ಮೀ ಸಂಗ್ರಹ. ೧ ಬಿ.ಸಿ.ಎಂ = ೩೫.೨೪೫ ಟಿ.ಎಂ.ಸಿ

ನೀರು ಮತ್ತು ವಾತಾವರಣ ಭೂಮಿಗಷ್ಟೇ ಸೀಮಿತವಾಗಿರುವ ಅನನ್ಯ ಸಂಪತ್ತು. ಇವೆರಡರಿಂದಲೇ ಭೂಮಿಯ ನಿಸರ್ಗ ಸೃಜಿತವಾಗಿ ಜೀವಕೋಟಿ ವಿಕಸನ ಹೊಂದಿದೆ. ನೀರು ಯಾವುದೇ ಜೀವಿಯ ಪ್ರಾಥಮಿಕ ಅಗತ್ಯ ಹಾಗೂ ನೈಸರ್ಗಿಕ ಸಂಪನ್ಮೂಲ . ಆದ್ದರಿಂದ ನೀರು ಸಾಮಾಜಿಕ ಹಾಗೂ ಆರ್ಥಿಕ ಆಯಾಮಗಳೆರಡನ್ನು ಹೊಂದಿದೆ. ಭಾರತದಲ್ಲಿ ಇದರೊಂದಿಗೆ ನೀರಿಗೆ ಭಾಷಿಕ, ಧಾರ್ಮಿಕ ಅಂಶಗಳು ಸೇರಿ ವರ್ಣರಂಜಿತವಾಗಿದೆ. ಬಳಕೆಗೆ ಲಭ್ಯವಿರುವ ನೀರಿನ ಪ್ರಮಾಣ ಸ್ಥಿರ ಹಾಗೂ ಸೀಮಿತ. ಆದರೆ ನಾಗರಿಕತೆ ವಿಕಸಿಸಿದಂತೆ, ಜೀವನ ಮಟ್ಟ ಸುಧಾರಿಸಿದಂತೆ. ನೀರಿನ ಬೇಡಿಕೆ ದಿನದಿಂದ ದಿನಕ್ಕೆ ಹೆಚ್ಚುತ್ತಿದೆ. ಆದ್ದರಿಂದ ಲಭ್ಯ ನೀರನ್ನೇ ನ್ಯಾಯೋಚಿತವಾಗಿ ಎಲ್ಲರೂ ಹಂಚಿ ಬಳಸಬೇಕಾದ ಅನಿವಾರ್ಯತೆ ಎದುರಾಗಿದೆ. ಆದ್ದರಿಂದ ಹಿಂದೆಂದಿಗಿಂತಲೂ ಇಂದು ನೀರಿನ ನಿರ್ವಹಣೆ, ಹಂಚಿಕೆಗಳು ಅತ್ಯಂತ ಆದ್ಯತೆಯ ಪಟ್ಟಿಯಲ್ಲಿವೆ. ಆದರೆ ದೇಶ ,ಭಾಷೆಗಳ ಹಂಗಿಲ್ಲದೆ ಹರಿಯುವ ನದಿಗೆ ವಾರಸುದಾರರು ನೂರಾರು ಜನ. ಇವರೆಲ್ಲರನ್ನು ಒಂದೇ ತೆಕ್ಕೆಗೆ ತೆಗೆದುಕೊಂಡು, ರಾಗ-ದ್ವೇಷ , ಪಕ್ಷಪಾತ ಅನ್ಯಾಯಗಳಾಗದಂತೆ ಹಂಚಿ, ಸಮೃದ್ಧಿ ತರಬೇಕಾದ ಸವಾಲು ಮುಂದಿದೆ, ಇದನ್ನು ಸಾಧಿಸಲು ಎರಡು ಮಾರ್ಗಗಳಿವೆ.

(ಅ) ನದಿಯೊಂದರ ಜಲಾನಯನ ಪ್ರದೇಶದ ಉಪನದಿಗಳ ಸಂಪರ್ಕ- ಪಾತ್ರಾಂತರಿಕ ಜೋಡಣೆ ( Intra Basin Linking)

(ಆ) ವಿಭಿನ್ನ ಜಲಾನಯನ ಹೊಂದಿರುವ ನದಿಗಳ ಸಂಪರ್ಕ- ಪಾತ್ರಾಂತರ ಜೋಡಣೆ (Inter Basin Linking)

## (ಅ) ನದಿಯೊಂದರ ಜಲಾನಯನ ಪ್ರದೇಶದ ಉಪನದಿಗಳ ಸಂಪರ್ಕ

ಈ ವಿಧಾನದಲ್ಲಿ ನಾವು ಜಲಾನಯನದ (ನದಿಪಾತ್ರ-River Basin) ನೈಸರ್ಗಿಕ ಸ್ವರೂಪವನ್ನು ಕೃತಕ ಮಾರ್ಗಗಳಿಂದ ಬದಲಿಸದೆ, ಅದರೊಂದಿಗೆ ಸಮನ್ವಯ ಸಾಧಿಸಿ ಸ್ವಲ್ಪ ಪ್ರಮಾಣದ ಮಾರ್ಪಾಡುಗಳನ್ನು ಮಾಡಿ ನೀರನ್ನು ನಿರ್ವಹಿಸಲು ಯತ್ನಿಸುತ್ತೇವೆ. ಯಾವುದೇ ನದಿಯ ಜಲಾನಯನ ವೈವಿಧ್ಯಮಯ ಭೂಪ್ರದೇಶ , ವ್ಯತ್ಯಸ್ತ ಮಳೆಯ ಪ್ರದೇಶಗಳನ್ನು ಒಳಗೊಂಡಿರುತ್ತದೆ. ಅಂತಹ ಸಮಯದಲ್ಲಿ ಜಲಾನಯನದ ಒಳಗಡೆಯಿರುವ ಉಪನದಿಗಳನ್ನು ಅಥವಾ ಹಳ್ಳ ಕೊಳ್ಳಗಳನ್ನು ಆಂತರಿಕವಾಗಿ ಜೋಡಿಸಿ ಜಲಾನಯನ ಪ್ರದೇಶಗಳಲ್ಲಿ ನೀರಿನ ಸಮತೋಲನ ತರುವುದು ಸಾಧ್ಯ.. ಇದನ್ನು ಪಾತ್ರಾಂತರಿಕ ವರ್ಗಾವಣೆ (Intra Basin Transfer) ಎನ್ನುತ್ತಾರೆ. ಉದಾಹರಣೆಗೆ ಹೇಳುವುದಾದರೆ ಕಾವೇರಿ ನದಿ ಹಾರಂಗಿ , ಹೇಮಾವತಿ , ಕಬಿನಿ (ತಾರಕ-ಹೆಬ್ಬಳ್ಳ-ನುಗು-ಗುಂಡಾಲ್) , ಸುವರ್ಣವತಿ, ಲಕ್ಷಣತೀರ್ಥ (ರಾಮತೀರ್ಥ) , ಶಿಂಷಾ (ವೀರವೈಷ್ಣವಿ-ಕನ್ನಿಹಳ್ಳ- ಚಿಕ್ಕಹೊಳೆ) ,ಅರ್ಕಾವತಿ (ಕುಮುದ್ವತಿ-ಮಾನಿಹಳ್ಳ-ಕುಟ್ಟೆ ಹೊಳೆ-ವೃಷಭಾವತಿ) ಮುಂತಾದ ಉಪನದಿಗಳ ಜಲಾನಯನಗಳ ಒಕ್ಕೂಟ. ಕಬಿನಿ ನದಿ-ತಾರಕ.ಹೆಬ್ಬಳ್ಳ,ನುಗು, ಗುಂಡಾಲ್ ತೊರೆ/ಹಳ್ಳಗಳ ಜಲಾನಯನಗಳ ಕಿರು ಒಕ್ಕೂಟ. ಈ ವಿಧಾನದಲ್ಲಿ ಶಿಂಷಾದಿಂದ , ಅರ್ಕಾವತಿಯ ಕಡೆ ಅಥವಾ ಕುಮುದ್ವತಿಯಿಂದ ವೃಷಭಾವತಿಯ ಕಡೆ ನೀರನ್ನು ಹರಿಸುವ ಗುರಿಯಿರುತ್ತದೆ. ಈ ವಿಧಾನದಲ್ಲಿ ಎಲ್ಲ ನೀರು ಮುಖ್ಯನದಿಯಾದ ಕಾವೇರಿ ಜಲಾನಯನ ಪ್ರದೇಶದಲ್ಲಿರುತ್ತದೆ. ಮುಖ್ಯ ಜಲಾನಯನ ಪ್ರದೇಶದಿಂದ ಹೊರಗೆ ನೀರು ಸಾಗಾಣಿಕೆಯಾಗುವುದಿಲ್ಲ. ಇದರಿಂದ (೧) ಪ್ರದೇಶವೊಂದರಲ್ಲಿ ಜಲಾನಯನದ ಪ್ರದೇಶಗಳಿಗೆ ಸಮರ್ಪಕ-ಸಮನ್ವಯ ರೀತಿಯಲ್ಲಿ ನೀರು ದಕ್ಕದಂತೆ ಮಾಡುವುದು-ಆರ್ಥಿಕ ಕ್ಷಮತೆ ಹೆಚ್ಚಿಸುವುದು. (೨) ಜಲಾನಯನದ ಒಳಗಿರುವ ಪ್ರದೇಶಗಳ ಕೃಷಿ ,ವಿದ್ಯುತ್ ಹಾಗೂ ಇತರ ಬೇಡಿಕೆಗಳಿಗೆ ಅದೇ ಜಲಾನಯನದ ನೀರನ್ನು ಹಂಚಿ ಕೊರತೆ ಇರುವಲ್ಲಿ ದಕ್ಕುವಂತೆ ಮಾಡುವುದು.(೩) ನೀರಿನ

ಹಂಚಿಕೆಯ ಮೂಲಕ ಸ್ಥಳೀಯವಾದ ಆರ್ಥಿಕ ಚಟುವಟಿಕೆಗಳಿಗೆ ಒತ್ತು ನೀಡಿ ಆ ಪ್ರದೇಶದ ಜನ ತಾತ್ಕಾಲಿಕ ಅಥವಾ ವಲಸೆ ಹೋಗುವುದನ್ನು ತಪ್ಪಿಸುವುದು ಗುರಿಯಾಗಿರುತ್ತದೆ..

## (ಅ.೧) ಒಂದೇ ಜಲಾನಯನ – ಹಲವು ಸಮಸ್ಯೆಗಳು

ನದಿಯ ಜಲಾನಯನ ಒಂದು ಭೌಗೋಳಿಕ ಸತ್ಯ  ಅದು ಒಂದು ನಿರ್ದಿಷ್ಟ ಭೂಪ್ರದೇಶ ತಾನು ಪಡೆಯುವ ಮಳೆ ನೀರಿಗೆ ಹೇಗೆ ಪ್ರತಿಕ್ರಿಯಿಸುತ್ತದೆಯೆಂದು ಸೂಚಿಸುವ ವ್ಯವಸ್ಥೆ. ನಾವು ಈಗಾಗಲೇ  ನೋಡಿದಂತೆ ನದಿ ಪಾತ್ರವೆಂದರೆ ನಿರ್ದಿಷ್ಟ ಭೌಗೋಳಿಕ ಪ್ರದೇಶದ ಹಲವಾರು ನೀರಿನ ಮೂಲಗಳು ನೈಸರ್ಗಿಕವಾಗಿ ಸೇರಿ ಹರಿಯುವ ವ್ಯವಸ್ಥೆ. ಇದರಲ್ಲಿ ಹಲವಾರು ಕಡೆಯಿಂದ ಹರಿದು ಬರುವ ನೀರು ಹಂತ ಹಂತವಾಗಿ ಸಂಗಮಗೊಳ್ಳುತ್ತ ನದಿಯಾಗುತ್ತದೆ. ಈ ನದಿ ಸಾಮಾನ್ಯವಾಗಿ ಸಮುದ್ರ ಸೇರುವಲ್ಲಿ ಅಂತ್ಯ ಕಾಣುತ್ತದೆ. ಹಾಗಾಗಿ ನದಿ ಪಾತ್ರವೆಂದರೆ ಭೌಗೋಳಿಕ ಪ್ರದೇಶವೊಂದರಲ್ಲಿನ ನೀರು ಒಂದು ನಿರ್ದಿಷ್ಟ ನೆಲೆಯತ್ತ ಸಾಗುವ ನಿರ್ದಿಷ್ಟ ವ್ಯವಸ್ಥೆ.

ಆದ್ದರಿಂದ ಯಾವುದೇ ಯೋಜನೆಯ ಅನುಷ್ಠಾನದಲ್ಲಿ ನದಿ ಪಾತ್ರವನ್ನು ಮೂಲ ಘಟಕವಾಗಿ ಪರಿಗಣಿಸಲಾಗುತ್ತದೆ. ಈ ಜಲಾನಯನದೊಳಗಿನ ನೀರಿನ ವರ್ಗಾವಣೆ, ನಿರ್ವಹಣೆ ಒಂದು ಪರಿಪೂರ್ಣ ಘಟಕವಾಗಿರುತ್ತದೆ. ಇಂತಹ ನದಿಗೆ ಜಲಾಶಯವನ್ನು ನಿರ್ಮಿಸಿದರೆ ಅದು ಕೆಳಗಿನ ಪ್ರದೇಶಗಳ ಅಗತ್ಯಗಳನ್ನು ಪೂರೈಸುತ್ತದೆ. ಉಪನದಿಯೊಂದಕ್ಕೆ ಅಣೆಕಟ್ಟು ಕಟ್ಟಿರದೆ ಮುಖ್ಯ ನದಿಗೆ ಅದರ ಕೊಡುಗೆ ಇಳಿಮುಖವಾಗುವುದಾದರೂ, ತನ್ನ ಭೂಪ್ರದೇಶಗಳ ಅಗತ್ಯಗಳನ್ನು ಪೂರೈಸುವಲ್ಲಿ ಸಾರ್ಥಕವಾಗುತ್ತದೆ. ನದಿ ಪಾತ್ರವೊಂದರ ನಿರ್ದಿಷ್ಟ ಪ್ರದೇಶದಲ್ಲಿ ಅಂತರ್ಜಲವನ್ನು ಅಧಿಕವಾಗಿ ಅವಲಂಬಿಸಿದರೆ, ಸುತ್ತಲಿನ ಸಣ್ಣ ಹಳ್ಳ , ತೊರೆಗಳಲ್ಲಿನ ಹರಿವು ಕುಗ್ಗಬಹುದು. ಆದರೆ ಇದರಿಂದ ನದಿ  ಪಾತ್ರದ ಒಟ್ಟಾರೆ ಜಲಶಾಸ್ತ್ರೀಯ ಸ್ವರೂಪವೇನೂ ಬರಲಾಗದು. ಆದ್ದರಿಂದ ನದಿ ಪಾತ್ರದೊಳಗಿನ ಚಟುವಟಿಕೆಗಳು ಏನೇ ಇರಲಿ ಅದನ್ನು ಅಖಂಡವಾಗಿ ಪರಿಗಣಿಸಬೇಕಾಗುತ್ತದೆ.

ಒಂದು ಪ್ರದೇಶದ ನೀರಾವರಿ ಅಗತ್ಯಗಳನ್ನು ಪೂರೈಸಲು ನದಿ ಪಾತ್ರದೊಳಗೆ ಹಲವಾರು ಯೋಜನೆಗಳಿಗೆ ನಾವು ಮೊರೆ ಹೋಗಬಹುದು. ಇವೆಲ್ಲವುಗಳಿಗೂ ಅತ್ಯಂತ ಸಹಜವಾದ ಮಾರ್ಗವೆಂದರೆ ಗುರುತ್ವದ ಮೂಲಕ ನೀರನ್ನು ಹರಿಸುವುದು. ನದಿಯೊಂದಕ್ಕೆ ಅಡ್ಡಲಾಗಿ ನಾವು ಆಣೆಕಟ್ಟನ್ನು ಕಟ್ಟಬಹುದು. ಇದರಿಂದ ಹರಿದು ಹೋಗುವ ನದಿ ನೀರನ್ನು ಸಂಗ್ರಹಿಸುತ್ತೇವೆಯೇ ಹೊರತು, ಅದರ ಹರಿವಿನಲ್ಲಿ ನಿಜವಾಗಿಯೂ ನಾವು ಯಾವುದೇ ಬದಲಾವಣೆಯನ್ನು ತಂದಿರುವುದಿಲ್ಲ. ಆದ್ದರಿಂದ ಜಗತ್ತಿನಾದ್ಯಂತ ಈಗ ಚಾಲ್ತಿಯಲ್ಲಿರುವ ಎಲ್ಲ ನೀರಾವರಿ ಯೋಜನೆಗಳು ಬಹುತೇಕ ಗುರುತ್ವ ಆಧಾರಿತ, ಜಲಾನಯನ ಅಂತರ್ಗತವಾಗಿರುತ್ತವೆ.

ನೈಸರ್ಗಿಕವಾಗಿ ನದಿ ಪಾತ್ರ ಒಂದು ಸಮಗ್ರ ಘಟಕವಾಗಿ ತೋರಿದರೂ ರಾಜಕೀಯವಾಗಿ ಅದು ಹಲವಾರು ವಿಂಗಡನೆಗಳನ್ನು ಹೊಂದಿರುವುದು ಸರ್ವೇ ಸಾಮಾನ್ಯ. ನದಿಪಾತ್ರವೊಂದು ಸಂಪೂರ್ಣವಾಗಿ ಒಂದು ರಾಜಕೀಯ ಘಟಕ ಉದಾಃ ರಾಜ್ಯವೊಂದಕ್ಕೆ ಸೇರಿದ್ದರೆ, ಅದರ ಅಭಿವೃದ್ಧಿಯಲ್ಲಿ ರಾಜಕೀಯ ಎಡರು ತೊಡರುಗಳು ಇರುವುದಿಲ್ಲ. ಒಂದು ರಾಜ್ಯದಲ್ಲಿ ಒಂದಕ್ಕಿಂತ ಹೆಚ್ಚು ನದಿ ಪಾತ್ರಗಳಿದ್ದು , ಒಂದು ನದಿ ಪಾತ್ರದಲ್ಲಿ ಹೆಚ್ಚುವರಿ ನೀರಿದ್ದು ಇನ್ನೊಂದರಲ್ಲಿ ನೀರಿನ ಕೊರತೆಯಿದ್ದರೆ , ಒಂದರಿಂದ ಮತ್ತೊಂದಕ್ಕೆ ನೀರನ್ನು ಸಾಗಿಸುವ ಆಶೆಗಳು ಮೊಳೆಯುವುದರಲ್ಲಿ ಅಶ್ಚರ್ಯವಿಲ್ಲ. ಯಾವುದೇ ಒಂದು ರಾಜ್ಯದೊಳಗಡೆ ಒಂದು ನದಿ ಪಾತ್ರದಿಂದ ಮತ್ತೊಂದು ನದಿಪಾತ್ರಕ್ಕೆ ನೀರನ್ನು ಸಾಗಿಸಲು ಹೆಚ್ಚಿನ ವಿರೋಧ ಕಾಣಿಸುವುದಿಲ್ಲ. ನೇತ್ರಾವತಿ ನೀರನ್ನು ಹೇಮಾವತಿಗೆ ತಿರುಗಿಸಲು ಪರಿಸರ ಸಂಬಂಧ ವಿರೋಧಗಳಿರುವುದೇ ಹೊರತು ಹಂಚಿಕೆಯ ಸ್ವರೂಪದಲ್ಲವೆಂಬುದನ್ನು ನಾವು ಕಾಣಬಹುದು.

ಒಂದು ನದಿ ಹಲವಾರು ರಾಜಕೀಯ , ಭಾಷಿಕ ಘಟಕಗಳ ಮೂಲಕ ಹರಿದಾಗ ಅದರ ಸಂಪನ್ಮೂಲಗಳನ್ನು ಹಂಚಿಕೊಳ್ಳುವಲ್ಲಿ ವಿವಾದಗಳು ಏಳುತ್ತವೆ. ಇವೇ ಅಂತಾರಾಜ್ಯ ನದಿ ವಿವಾದಗಳು. ಒಂದು ನದಿಯ ನೀರನ್ನು ಹಂಚಿಕೊಳ್ಳಲು ಜಗತ್ತಿನಲ್ಲಿ ರೂಢಿಯಲ್ಲಿರುವ ಪದ್ಧತಿಗಳನ್ನು ಮುಂದೆ ನೀಡಲಾಗಿದೆ.

**ನದಿ ನೀರು ಹಂಚಿಕೆಯ ತತ್ತ್ವ/ಸೂತ್ರಗಳು**

| ನೀತಿ-ವಿವರಣೆ | ಸ್ವರೂಪ |
|---|---|
| **೧.ಸಮಾನ ಬಳಕೆ ಮತ್ತು ಅಗತ್ಯತೆ**<br>ನದಿ ಪಾತ್ರದ ಬೇರೆಯವರ ಹಕ್ಕಿಗೆ ಚ್ಯುತಿ ಬಾರದಂತೆ ನೀರನ್ನು ಬಳಸುವ ಸಮಾನಾವಕಾಶ | ವಿವಾದಕ್ಕೆ ಕಾರಣ. ಅಗತ್ಯ ಮತ್ತು ಹಂಚಿಕೆಯನ್ನು ನಾನಾ ರಾಜ್ಯ/ದೇಶಗಳು ತಮ್ಮ ಅನುಕೂಲಕ್ಕೆ ತಕ್ಕಂತೆ ಪರಿಗಣಿಸುವ ಅಪಾಯ. ರಾಜಿ-ಅನುಸಂಧಾನ ಫಲ ನೀಡದಿದ್ದರೆ ಕಾನೂನಿನಿಂದ ಪರಿಹರಿಸಬೇಕಾದ ಅನಿವಾರ್ಯತೆ |
| **೨.ಚಾರಿತ್ರಿಕ ಆದ್ಯತೆ**<br>ಚಾರಿತ್ರಿಕ ಕಾರಣ ಅಥವಾ ಹಿರಿತನದ ಆಧಾರದ ಮೇಲೆ ನೀರಿನ ಒಡೆತನ | ಪ್ರಚಲಿತ ಸ್ಥಿತಿಗತಿಗಳಿಂದ ವಿಮುಖ. ವ್ಯಾಜ್ಯ ಮತ್ತು ಸಂಘರ್ಷಗಳಿಗೆ ಕಾರಣ. |
| **೩.ನೈಸರ್ಗಿಕ ಹರಿವು**<br>ನದಿಪಾತ್ರದ ಪ್ರತಿಯೊಂದು ಕೆಳ ಮಟ್ಟದ ಪ್ರದೇಶ ಮೇಲಿನ ಪ್ರದೇಶಗಳಿಂದ ಯಾವುದೇ ಅಡೆ , ತಡೆಗಳಿಲ್ಲದೆ ಸಹಜವಾಗಿ ನೀರು ಹರಿಯುವಂತೆ ಅದನ್ನು ಪಡೆಯುವ ಅವಕಾಶ | ಮೇಲ್ಭಾಗದ ರಾಜ್ಯ/ದೇಶಗಳು ಅಲ್ಪ ಪ್ರಮಾಣದ ನೀರನ್ನು ಮಾತ್ರ ಬಳಸಲು ಅವಕಾಶವಿದೆ. ಮೇಲ್ಭಾಗದ ರಾಜ್ಯ/ದೇಶಗಳು ನದಿಗಳಿಗೆ ನಿಡುವ ನೀರಿನ ಕಾಣಿಕೆಯನ್ನು ನಿರಾಕರಿಸುತ್ತದೆ. ಸಂಘರ್ಷಕ್ಕೆ ಕಾರಣ |
| **೪.ಪ್ರಾದೇಶಿಕ ಸಾರ್ವಭೌಮತ್ವ**<br>ತನ್ನ ಪ್ರದೇಶದಲ್ಲಿನ ನೀರನ್ನು ಇತರ ಪ್ರದೇಶಗಳ ಯಾವ ಹಿತಾಸಕ್ತಿಗಳನ್ನು ಪರಿಗಣಿಸದೆ ಬಳಸುವ ಅಧಿಕಾರ | ವಿವಾದಗ್ರಸ್ತ. ಸ್ವಾರ್ಥ ಕೇಂದ್ರಿತ-ಬಾಹ್ಯ ಸನ್ನಿವೇಶಗಳ ಅವಗಣನೆ |
| **೫.ಪಾಲುದಾರಿಕೆ**<br>ನದಿ ಪಾತ್ರದ ಮೇಲಿನ ಪ್ರದೇಶಗಳು ಮೇಲ್ಭಾಗದ ನೀರಿನ ಬಳಕೆಯ ವಿರುದ್ಧ ವಿಟೊ ಚಲಾಯಿಸುವ ಅಧಿಕಾರ | ಸಂಘರ್ಷಗಳಿಗೆ ಕಾರಣ. ಕೆಳಭಾಗದ ರಾಜ್ಯ/ದೇಶಗಳು ಮೇಲ್ಭಾದವುಗಲ ಮೇಲೆ ಸವಾರಿ ಮಾಡುವ ಸಾಧ್ಯತೆ |
| **೬.ಸಮಾನ ಹಿತಾಸಕ್ತಿ**<br>ಹಲವಾರು ಪ್ರದೇಶಗಳ ಮೂಲಕ ಸಾಗುವ ನದಿ ಒಂದು ಘಟಕವೆಂದು ಪರಿಗಣಿಸಿ ಆ ಆಧಾರದ ಮೇಲೆ ಬಳಸುವ ಸಮನ್ವಯ ಮಾರ್ಗ | ಆದರ್ಶ ಸ್ಥಿತಿ. ರಾಜಕೀಯ ಮೇರೆಗಳನ್ನು ಪರಿಗಣಿಸದಿರುವ ದೋಷ. |
| **೭.ಸಾಂಸ್ಥಿಕ ಹಂಚಿಕೆ**<br>ಕಾನೂನು ಅಥವಾ ಬೇರೆ ಯಾವುದೇ ಅಧಿಕೃತ ಮೂಲದಿಂದ ಸ್ಥಾಪಿಸಲ್ಪಟ್ಟ ಸಂಸ್ಥೆ ತನ್ನದೇ ಆದ ಮಾನದಂಡಗಳನ್ನು ಬಳಸಿ ಪಾಲುದಾರರಿಗೆ ನೀರನ್ನು ಹಂಚುವುದು | ನೀರಿನ ಹಂಚಿಕೆಯ ಮಾನದಂಡಗಳು ನಿಷ್ಪಕ್ಷಪಾತವಾಗಿರದಿದ್ದಲ್ಲಿ ರಾಜ್ಯ/ದೇಶಗಳ ನಡುವೆ ಸಮ್ಘರ್ಷ |
| **೮.ವಿಶ್ವ ಸಂಸ್ಥೆ ಸೂತ್ರ**<br>ಸಮಾನ ಬಳಕೆ , ಅಗತ್ಯತೆ , ಬೇರೆ ದೇಶಗಳ ಹಿತಾಸಕ್ತಿಯನ್ನು ಕಡೆಗಣಿಸದಂತಹ ತತ್ವಗಳನ್ನು ಪರಿಗಣಿಸಿ ಹಲವಾರು ಮಾರ್ಗದರ್ಶಿ ಸೂತ್ರಗಳನ್ನು ರೂಪಿಸಿದೆ. | ಭಾರತ ಮತ್ತು ಪಾಕಿಸ್ತಾನ ಈ ನಿರ್ಣಯದ ಮತ ಚಲಾವಣೆಯ ಸಮಯದಲ್ಲಿ ಗೈರುಹಾಜರಾಗಿದ್ದವು. |

ನದಿ ನೀರು ಹಂಚಿಕೆ ಕುರಿತಾದಂತೆ ಮೇಲಿರುವ ಯಾವುದೇ ಒಂದು ತತ್ತ್ವ ಅಥವಾ ಹಲವು ತತ್ತ್ವಗಳು ನೀರು ಹಂಚಿಕೆಯ ಸಂಘರ್ಷವನ್ನು ಕೊನೆಗಾಣಿಸುತ್ತವೆ ಎಂದು ಹೇಳಲಾಗದು. ಭಾರತದಲ್ಲಿ ಅಂತಾರಾಜ್ಯ ನದಿ ವಿವಾದಗಳಿಗೆ ಬಹು ದೀರ್ಘ

ಚರಿತ್ರೆಯಿದೆ. ಭಾರತದಲ್ಲಿ ನೀರಿನ ಹಂಚಿಕೆ ಕುರಿತಾದಂತೆ ಹಲವಾರು ರಾಜ್ಯಗಳ ನಡುವೆ ವಿವಾದಗಳು ಭುಗಿಲೆದ್ದಿವೆ. ಇದಕ್ಕಾಗಿ ಜಲ ನ್ಯಾಯಮಂಡಳಿಗಳು ರಚಿಸಲ್ಪಟ್ಟಿವೆ. ಈ ನ್ಯಾಯ ಮಂಡಳಿಗಳು ಅಂತರಾಷ್ಟ್ರೀಯ ದೃಷ್ಟಿಕೋನದಂತೆ ಒಂದು ನದಿ ಪಾತ್ರವನ್ನು ಪರಿಪೂರ್ಣ ಘಟಕವೆಂದು ಪರಿಗಣಿಸಿವೆ. ಆದರೆ ಇಂದು ಎಲ್ಲ ಸಂದರ್ಭಗಳಲ್ಲೂ ಕಟ್ಟುನಿಟ್ಟಾಗಿ ಪಾಲನೆಯಾಗಿಲ್ಲ. ನದಿ ನೀರಿನ ಹಂಚಿಕೆಯ ಹಿಂದಿರುವ ಜಟಿಲ ಸಂಗತಿಗಳ ಸ್ಥೂಲ ಅರಿವನ್ನು ಮುಂದಿನ ಕೆಲ ವಿವಾದಗಳಲ್ಲಿ ಕಾಣಬಹುದು.

**ರಾವಿ-ಬಿಯಾಸ್ ವಿವಾದ :** ಭಾರತ ಸ್ವತಂತ್ರವಾಗಿ ಪಾಕಿಸ್ತಾನದ ಉದಯವಾದ ನಂತರ ರಾವಿ-ಬಿಯಾಸ್ ನದಿ ನೀರಿನ ಹಂಚಿಕೆ ತೀರ್ಮಾನಕ್ಕಾಗಿ ರಾವಿ ಬಿಯಾಸ್ ನ್ಯಾಯ ಮಂಡಳಿ (ಎರಡಿ ಟ್ರಿಬ್ಯುನಲ್ ) ರಚನೆಯಾಯಿತು. ರಾವಿ-ಬಿಯಾಸ್-ಸಟ್ಲೆಜ್ ನದಿಗಳು ಭಾರತದ ಮೂಲಕ ಪಾಕಿಸ್ತಾನಕ್ಕೆ ಹರಿಯುವ ನದಿಗಳು. ಇವೆಲ್ಲವೂ ಮುಂದೆ ಸಿಂಧೂ ನದಿಯನ್ನು ಸೇರಿ ಒಂದೇ ಕುರಿತಾಗಿ ಸಮುದ್ರವನ್ನು ಸೇರುತ್ತವೆ. ರಾವಿ-ಬಿಯಾಸ್ ಪಾತ್ರಗಳನ್ನು ಪ್ರತ್ಯೇಕ ವ್ಯವಸ್ಥೆಗಳಾಗಿ ಪರಿಗಣಿಸಬೇಕೆಂದು ವಾದವನ್ನು ಈ ನ್ಯಾಯಮಂಡಳಿ ತಿರಸ್ಕರಿಸಿ ಅಂತಿಮ ಏಕ ಬಿಂದು ಐಕ್ಯತೆಗೆ ಒತ್ತು ಕೊಟ್ಟು ಸಿಂಧೂ ನದಿ ಪಾತ್ರವನ್ನು ಸಮಗ್ರವಾಗಿ ಒಂದೇ ಘಟಕವೆಂದು ಪರಿಗಣಿಸಿದೆ. ಆದರೆ ಇದು ಎಲ್ಲ ಸಂದರ್ಭಗಳಲ್ಲೂ ಜಾರಿಯಾಗಿಲ್ಲ.

**ಕೃಷ್ಣಾ ನದಿ ವಿವಾದ:** ಕರ್ನಾಟಕ ಉದಯಿಸುವ ಮೊದಲು ಅಸ್ತಿತ್ವದಲ್ಲಿದ್ದ ಮೈಸೂರು ರಾಜ್ಯ ಯಾವುದೇ ನದಿ ನೀರನ್ನು ಹಂಚುವಾಗ ಆ ನದಿಪಾತ್ರದ ಹೊರಗಿನ ಪ್ರದೇಶಗಳಿಗೆ ನೀರನ್ನು ಸಾಗಿಸುವುದು ಕಾನೂನು ಬಾಹಿರವೆಂದು ವಾದಿಸಿತು. ಇದಕ್ಕೆ ವಿರುದ್ಧವಾಗಿ ಆಂಧ್ರಪ್ರದೇಶ ತನ್ನ ಪಾಲಿನ ನೀರಿನಲ್ಲಿ ತಾನು ಬೇಕಾದೆಡೆಗೆ ನೀರನ್ನು ತಿರುಗಿಸಿಕೊಳ್ಳುವ ಹಕ್ಕು ತನಗಿದೆಯೆಂದು ಪ್ರತ್ಯುತ್ತರ ನೀಡಿತು. ಕೃಷ್ಣಾ ನದಿ ನೀರಿನ ಹೊಂಚಿಕೆ ನಿರ್ಧರಿಸಲು ರಚಿತವಾದ ನ್ಯಾಯ ಮಂಡಳಿ ಇದನ್ನು ಸಮಗ್ರವಾಗಿ ಪರಿಶೀಲಿಸಿ, ಇತರ ದೇಶಗಳಲ್ಲಿರುವ ವ್ಯವಸ್ಥೆಗಳನ್ನು ಗಮನಿಸಿ ಈ ತೀರ್ಮಾನಗಳಿಗೆ ಬಂದಿತು. (೧) ಯಾವುದೇ ರಾಜ್ಯ ಒಂದು ನದಿಯ ತನ್ನ ಪಾಲಿನ ನೀರನ್ನು, ನದಿ ಪಾತ್ರದ ಹೊರಗಿನ ಪ್ರದೇಶಗಳಿಗೆ ಸಾಗಿಸುವುದು ಕಾನೂನು ಬಾಹಿರವಲ್ಲ (೨) ನದಿ ಪಾತ್ರದ ಹೊರಗಿನ ಪ್ರದೇಶಗಳಿಗೆ ನೀರನ್ನು ಸಾಗಿಸುವುದು ಅನಿವಾರ್ಯ. (೩) ಪಾತ್ರಾಂತರಕ್ಕಿಂತ ಪಾತ್ರಾಂತರ್ಗತ ನೀರಿನ ತಿರುವಿಕೆಗೆ ಹೆಚ್ಚಿನ ಪ್ರಾಶಸ್ತ್ಯ ನೀಡಬೇಕು ಎಂಬ ತೀರ್ಮಾನ ನೀಡಿತು.

ಕೃಷ್ಣಾ ಜಲಮಂಡಳಿ ತನ್ನ ತೀರ್ಮಾನಗಳಲ್ಲಿ ಮಹಾರಾಷ್ಟ್ರ ಜಲವಿದ್ಯುತ್ ಯೋಜನೆಗಳಿಗಾಗಿ ಕೃಷ್ಣಾ ನದಿಯ ನೀರನ್ನು ಅರಬ್ಬಿ ಸಮುದ್ರದತ್ತ ತಿರುಗಿಸುವುದಕ್ಕೆ ನಿಯಂತ್ರಣ ಹೇರಿ ಉಳಿದಂತೆ ಆ ರಾಜ್ಯ ತನ್ನ ಪಾಲಿನ ನೀರನ್ನು ತನಗೆ ಬೇಕಾದಲ್ಲಿಗೆ ಸಾಗಿಸುವ ಸ್ವಾತಂತ್ರ್ಯ ನೀಡಿದೆ.

ಕೃಷ್ಣಾ ನ್ಯಾಯಮಂಡಳಿ ವಿಚಾರಣೆಯಲ್ಲಿರುವಾಗ ಅದರ ಮೂರು ಪಾಲುದಾರ ರಾಜ್ಯಗಳಾದ ಕರ್ನಾಟಕ, ಆಂಧ್ರ ಹಾಗೂ ಮಹಾರಾಷ್ಟ್ರ ತಮ್ಮ ಲಭ್ಯ ನೀರಿನಲ್ಲಿ 5 ಟಿ.ಎಂ.ಸಿ ಯಷ್ಟು ನೀರನ್ನು ಚೆನ್ನೈನ ಕುಡಿಯುವ ನೀರಿನ ಯೋಜನೆಗಾಗಿ ಬಿಟ್ಟುಕೊಟ್ಟವು. ಇದನ್ನು ತೆಲುಗು– ಗಂಗಾ ಯೋಜನೆಯಡಿ ತಂದ ಆಂಧ್ರಪ್ರದೇಶ ಇದರೊಂದಿಗೆ ಇತರ ನೀರಾವರಿ ಯೋಜನೆಗಳನ್ನು ಸಹ ಸೇರಿಸಿತು. ಇದನ್ನು ಕರ್ನಾಟಕ ಮತ್ತು ಮಹಾರಾಷ್ಟ್ರ ಪ್ರಶ್ನಿಸಿದವು. ಆದರೆ ಇದು ಅಂತಿಮವಾಗಿ ಆಂಧ್ರಪ್ರದೇಶ ತನ್ನ ಪಾಲಿನ ಬಳಕೆಯನ್ನು ಮೀರುವಂತಹ ಯೋಜನೆಗಳನ್ನು ಕೈಗೆತ್ತಿಕೊಳ್ಳುವಂತಿಲ್ಲ ಎಂಬ ನಿರ್ಧಾರಕ್ಕೆ ಬಂದು ನಿಂತಿತು.

ಕೃಷ್ಣಾ ನ್ಯಾಯಮಂಡಳಿ ಲಭ್ಯ ನೀರಿನ ಪ್ರಮಾಣವನ್ನು ಪಾಲುದಾರ ರಾಜ್ಯಗಳಿಗೆ ಹಂಚಿ ಹೆಚ್ಚುವರಿ ನೀರನ್ನು ಆಂಧ್ರ ಪ್ರದೇಶ ಬಳಸಿಕೊಳ್ಳಬಹುದಾದರೂ ಅದರ ಮೇಲಿನ ಹಕ್ಕನ್ನು ಸಾಧಿಸುವಂತಿಲ್ಲ ಎಂದು ಹೇಳಿತು. ಕರ್ನಾಟಕ ಈ ಅಂಶದತ್ತ ಗಮನ ಸೆಳೆದು ಹೆಚ್ಚುವರಿ ನೀರನ್ನು ಆಂಧ್ರ ಪ್ರದೇಶ ಬೇಕಾದೆಡೆಗೆ ತಿರುಗಿಸುವ ಹಕ್ಕನ್ನು ಹೊಂದಿಲ್ಲವೆಂದು ವಾದಿಸಿತು. ಆದರೆ ನ್ಯಾಯ ಮಂಡಳಿ (ಸದಸ್ಯರು) ಈ ಕುರಿತಾಗಿ ಯಾವುದೇ ಸ್ಪಷ್ಟತೆ ನೀಡಲು ಒಮ್ಮತಕ್ಕೆ ಬರದಾಯಿತು.

**ಕೃಷ್ಣಾ -ಗೋದಾವರಿ ವಿವಾದ :** ಕರ್ನಾಟಕ ಹಾಗೂ ಮಹಾರಾಷ್ಟ್ರ ಗೋದಾವರಿ ನದಿ ನೀರನ್ನು ಆಂಧ್ರಪ್ರದೇಶ ಕೃಷ್ಣಾ ಕೊಳ್ಳದತ್ತ ತಿರುಗಿಸಲು ನಿರ್ದೇಶಿಸಬೇಕೆಂದು ಕೋರಿದವು. ಆಂಧ್ರಪ್ರದೇಶ ಇದನ್ನು ವಿರೋಧಿಸಿತು. ನಂತರ ಮೂರು ರಾಜ್ಯಗಳು ತಮ್ಮ ಪಾಲಿನ ಗೋದಾವರಿ ನೀರನ್ನು ತಮಗೆ ಬೇಕಾದಲ್ಲಿಗೆ ತಿರುಗಿಸಿಕೊಳ್ಳಬಹುದೆಂದು ಸಹಮತಕ್ಕೆ ಬಂದವು.

ಗೋದಾವರಿ, ಗಂಗಾ ಅಥವಾ ಇನ್ನಾವುದೇ ಬೇರೊಂದು ನದಿಪಾತ್ರದ ನೀರನ್ನು ಮುಂದೆ ಆಂಧ್ರಪ್ರದೇಶ ಕೃಷ್ಣಾ ಕೊಳ್ಳಕ್ಕೆ ತಿರುಗಿಸಿದರೆ ಅದರಲ್ಲೂ ತಮಗೆ ಬರಬೇಕಾದ ಪಾಲನ್ನು ಆಂಧ್ರಪ್ರದೇಶ ನೀಡಬೇಕೆಂದು ತೀರ್ಮಾನ ನೀಡಬೇಕೆಂದು ಕರ್ನಾಟಕ ಹಾಗೂ ಮಹಾರಾಷ್ಟ್ರ ವಾದಿಸಿದವು. ಆಂಧ್ರಪ್ರದೇಶ ಇದನ್ನು ತೀವ್ರವಾಗಿ ವಿರೋಧಿಸಿತು. ಆದರೆ ನ್ಯಾಯಮಂಡಳಿ ಮುಂದೆ ಎಂದಾದರೂ ಯಾವುದೇ ಮೂಲದಿಂದ ಕೃಷ್ಣಾ ನದಿಗೆ ಹೆಚ್ಚಿನ ನೀರು ಲಭ್ಯವಾದರೆ, ಅದರಲ್ಲಿ ತಮ್ಮ ಪಾಲನ್ನು ಕೇಳುವ ಹಕ್ಕು ಇನ್ನುಳಿದ ರಾಜ್ಯಗಳಿಗೆ ಇರುತ್ತದೆಯೆಂಬ ನಿಲುವು ತಳೆಯಿತು.

ಇದರಿಂದ ಈಗ ತೀರ್ಮಾನಗೊಂಡಿರುವ ನದಿ ವಿವಾದಗಳು ಸಹ ಮುದೊಂದು ದಿನ ಆ ನದಿಯ ಕೊಳ್ಳಗಳಿಗೆ ಬೇರೆ ಮೂಲಗಳಿಂದ ಹೆಚ್ಚಿನ ನೀರು ಬಂದಾಗ ಮತ್ತೊಂದು ಸುತ್ತಿನ ಹಂಚಿಕೆ ವಿವಾದಗಳಿಗೆ ಕಾರಣವಾಗುವುದು ಸ್ಪಷ್ಟವಾಗಿದೆ. ಗೋದಾವರಿ ನದಿ ಹಂಚಿಕೆಯಲ್ಲಿ ಸಹ ಕರ್ನಾಟಕ, ಮಹಾರಾಷ್ಟ್ರ ಮತ್ತು ಆಂಧ್ರಪ್ರದೇಶ ಪಾಲುದಾರ ರಾಜ್ಯಗಳು. ಕೃಷ್ಣಾ ನ್ಯಾಯ ಮಂಡಳಿಯ ಈ ನಿಲುವನ್ನು ಗಮನಕ್ಕೆ ತೆಗೆದುಕೊಂಡ ಗೋದಾವರಿ ನ್ಯಾಯ ಮಂಡಳಿ ಪಾಲುದಾರ ರಾಜ್ಯಗಳ ನಡುವೆ ಹಲವು ಸುತ್ತಿನ ಸಂಧಾನ ಮಾತುಕತೆಗಳನ್ನು ನಡೆಸಿ ಕೇಂದ್ರೀಯ ಜಲ ಆಯೋಗದ ಒಪ್ಪಿಗೆಯ ನಂತರವೇ ಆಂಧ್ರ ಪ್ರದೇಶ 80 ಟಿಎಂ.ಸಿ ಸಾಮರ್ಥ್ಯದ ಪೋಲಾವರಂ ತಿರುವು ಯೋಜನೆಯನ್ನು ಕೈಗೆತ್ತಿಕೊಳ್ಳಬಹುದೆಂದು ಹೇಳಿತು.

## ನರ್ಮದಾ ವಿವಾದ :

ರಾಜಸ್ಥಾನ ನರ್ಮದಾ ನದಿಪಾತ್ರದ ರಾಜ್ಯವಲ್ಲ. ಆದ್ದರಿಂದ ಅದಕ್ಕೆ ನರ್ಮದಾ ನದಿಯಲ್ಲಿ ಪಾಲು ಕೇಳುವ ಹಕ್ಕಿಲ್ಲವೆಂದು ಮಹಾರಾಷ್ಟ್ರ ಮತ್ತು ಮಧ್ಯಪ್ರದೇಶ ವಾದಿಸಿದವು. ಇದನ್ನು ನ್ಯಾಯಮಂಡಳಿ ಪುರಸ್ಕರಿಸಿತು. ಇದಕ್ಕೆ ವಿರುದ್ಧವಾಗಿ ರಾಜಸ್ಥಾನ ಸುಪ್ರಿಂ ಕೋರ್ಟ್ ಮೆಟ್ಟಿಲೇರಿತಾದರೂ ನಂತರ ತನ್ನ ದಾವೆಗಳನ್ನು ಹಿಂದಕ್ಕೆ ಪಡೆಯಿತು. ನಂತರ ಮಹಾರಾಷ್ಟ್ರ ಮಧ್ಯಪ್ರದೇಶ ಮತ್ತು ಗುಜರಾಜ್ ವಾರ್ಷಿಕವಾಗಿ ನೀರನ್ನು ಬರಪೀಡಿತ ರಾಜಸ್ಥಾನಕ್ಕೆ ನೀಡಲು ಒಪ್ಪಿದವು. ಇದನ್ನು ನ್ಯಾಯಮಂಡಳಿ ಒಂದು ಪರಸ್ಪರ ಒಪ್ಪಂದವೇ ಹೊರತು ಕಾನೂನುಬದ್ಧವಾಗಿ ರಾಜಸ್ಥಾನಕ್ಕೆ ಯಾವುದೇ ಹಕ್ಕಿಲ್ಲವೆಂದು ಪರಿಗಣಿಸಿತು. ಈ ಒಪ್ಪಂದದ ಕಾರಣವಾಗಿ ರಾಜಸ್ಥಾನ ನರ್ಮದಾ ನ್ಯಾಯಮಂಡಳಿಯ ಸದಸ್ಯತ್ವ ಹೊಂದಿತು. ಇಂತಹ ವಿಶೇಷ ಸಂದರ್ಭಗಳನ್ನು ಒಳಗೊಳ್ಳುವಂತೆ ಕಾನೂನಿನಲ್ಲಿ ತಿದ್ದುಪಡಿ ಮಾಡಬೇಕೆಂದು ನರ್ಮದಾ ನ್ಯಾಯ ಮಂಡಳಿ ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡಿತು. ನದಿಪಾತ್ರದಾಚೆಗಿನ ರಾಜ್ಯ ಇಂತಹ ವಿವಾದಗಳಲ್ಲಿ ಪಾಲುದಾರನಾಗಿರುವುದು ಸಂವಿಧಾನ ಬದ್ಧವೇ ಅಥವಾ ಕಾನೂನಿನ ತಿದ್ದುಪಡಿಗಳೇನಾದರೂ ಬೇಕೆ ಎನ್ನುವುದು ಇನ್ನೂ ಸ್ಪಷ್ಟವಾಗಿಲ್ಲ.

ನರ್ಮದಾ ನ್ಯಾಯಮಂಡಳಿ ಸದಸ್ಯ ರಾಜ್ಯಗಳು ನಮ್ಮ ಪಾಲಿನ ನೀರನ್ನು ಆ ನದಿ ಪಾತ್ರದ ಹೊರಗಿನ ಪ್ರದೇಶಗಳಿಗೆ ಸಾಗಿಸು ಸಮಸ್ಯೆಯತ್ತ ಹೆಚ್ಚಿನ ಗಮನ ಹರಿಸಿಲ್ಲ, ಗುಜರಾತ್ ಸರ್ಕಾರ ನರ್ಮದಾ ನದಿಯ ಉತ್ತರ ಭಾಗದ ಉಪನದಿಗಳ ಬಳಕೆಯ ಮೇಲಿನ ಹೆಚ್ಚಿನ ಒತ್ತು ನೀಡಿದ್ದರಿಂದ, ಈ ಸಮಸ್ಯೆ ಅಲ್ಲಿ ಹೆಚ್ಚಾಗಿ ಕಂಡುಬಂದಿಲ್ಲ.

ಭಾರತದಲ್ಲಿ ಈವರೆಗೆ ಜರುಗಿದ ನದಿ ನೀರಿನ ಹಂಚಿಕೆ ವಿವಾದಗಳು , ಅವುಗಳನ್ನು ಪರಿಹರಿಸಲು ಕಂಡುಕೊಂಡಿರುವ ಮಾರ್ಗಗಳನ್ನು ಮುಂದಿನ ಕೋಷ್ಟಕದಲ್ಲಿ ಪಟ್ಟಿಮಾಡಲಾಗಿದೆ.

**ಕೋಷ್ಟಕ-೧ : ನದಿ ನೀರು ಹಂಚಿಕೆ ವಿವಾದದ ವಿವರಗಳು**

## (ಆ) ವಿಭಿನ್ನ ಜಲಾನಯನ  ಹೊಂದಿರುವ ನದಿಗಳ ಸಂಪರ್ಕ- ಪಾತ್ರಾಂತರ ಜೋಡಣೆ (Inter Basin Linking)

ಮೇಲೆ ತಿಳಿಸಿದಂತೆ  ಒಂದು ನದಿಯ ಜಲಾನಯನ ಪ್ರದೇಶದ ಒಳಗಡೆಯೇ ಕೆಲ ಮಾರ್ಪಾಡುಗಳನ್ನು ಮಾಡಿ ಕೆಲಮಟ್ಟಿಗೆ ನೀರಿನ ಹಂಚಿಕೆಯಲ್ಲಿ ಸಮತೋಲನ ತರಬಹುದು. ಆದರೆ ನದಿಯ ಉಪನದಿಗಳಲ್ಲಿಯೇ ಹೆಚ್ಚುವರಿ ನೀರು ದಕ್ಕದಿದ್ದರೆ ಅಥವಾ ಅಲ್ಲಿ ದಕ್ಕುವ ಹೆಚ್ಚುವರಿ ನೀರಿನ ಪ್ರಮಾಣ ಸುಸ್ಥಿರವಲ್ಲದಿದ್ದರೆ ಬೇರೆಯದೇ ಆದ ಪರಿಹಾರಗಳನ್ನು ಚಿಂತಿಸಬೇಕಾಗುತ್ತದೆ. ಇದಕ್ಕೆ ನದಿಯೊಂದರ ಜಲಾನಯನದ ಹೊರಗೆ ನೋಡಬೇಕಾಗುತ್ತದೆ. ಭಾರತದ ಒಟ್ಟು ನದಿ ನೀರಿನ 60% ಭಾಗ ಬ್ರಹ್ಮಪುತ್ರಾ ಮತ್ತು ಗಂಗಾ ನದಿಗಳಲ್ಲಿಯೇ ಹರಿಯುತ್ತದೆ. ಈ ನದಿಗಳ ಪ್ರವಾಹದಿಂದ ಆಸ್ಸಾಂ. ಬಿಹಾರ್, ಪಶ್ಚಿಮಬಂಗಾಳ, ಉತ್ತರಪ್ರದೇಶದಲ್ಲಿ ಪ್ರತಿವರ್ಷ ಅಪಾರ ಕಷ್ಟ ನಷ್ಟಗಳು ಉಂಟಾಗುತ್ತಿವೆ. ಇದಕ್ಕೆ ತದ್ವಿರುದ್ದವಾಗಿ ರಾಜಸ್ಥಾನ, ಗುಜರಾತ್, ಆಂಧ್ರಪ್ರದೇಶ, ಕರ್ನಾಟಕ, ತಮಿಳುನಾಡು ಬರಗಾಲದ ದವಡೆಗೆ ಸಿಲುಕಿವೆ. ಆದ್ದರಿಂದ ನೆರೆಪೀಡಿತ ಪ್ರದೇಶದ ನೀರನ್ನು ಕೊರತೆಯ ಪ್ರದೇಶಗಳಿಗೆ ಸಾಗಿಸಿ, ನೀರಿನ ಲಭ್ಯತೆಯಲ್ಲಿ ಸಮತೋಲನ ತರುವುದು ಈ ಎರಡು ಸಮಸ್ಯೆಗಳಿಗೂ ಪರಿಹಾರವೆನ್ನುವುದು ಸಹಜವಾಗಿ ಭಾಸವಾಗುತ್ತದೆ. ಇದಕ್ಕಾಗಿ ಪಾತ್ರಾಂತರ ನೀರಿನ ವರ್ಗಾವಣೆ ಆಕರ್ಷಕವೆನಿಸುತ್ತದೆ. ಬ್ರಹ್ಮಪುತ್ರಾ, ಗಂಗಾ, ಮತ್ತು ಇವುಗಳ ಉಪನದಿಗಳು, ಮಹಾನದಿ, ಗೋದಾವರಿ, ಪಶ್ಚಿಮ ಕರಾವಳಿಯ ಪಶ್ಚಿಮವಾಹಿನಿ  ನದಿಗಳಲ್ಲಿ ಹೆಚ್ಚುವರಿ ನೀರು ಲಭ್ಯವಿದೆ. ಈ ನೀರನ್ನು ಮಳೆಗಾಲದಲ್ಲಿ ಸಂಗ್ರಹಿಸಿ ಬೇಕಾದ ಕಡೆ ಸಾಗಿಸಿ, ಕೊರತೆಯ ಪ್ರದೇಶಗಳಲ್ಲಿ ಸಹ ಸಮೃದ್ಧತೆಯನ್ನು ಏಕೆ ತರಬಾರದೆಂದು ಪ್ರಶ್ನೆ ಯಾರಿಗಾದರೂ ಮೂಡದಿರದು, ಕರ್ನಾಟಕದಲ್ಲಿಯೇ ಪಶ್ಚಿಮದತ್ತ ಹರಿಯುವ ಕರಾವಳಿಯ ನದಿಗಳು ಕರ್ನಾಟಕದ ಒಟ್ಟು ನೀರಿನಲ್ಲಿ ೫೦% ಕ್ಕೂ ಅಧಿಕ ಪ್ರಮಾಣದ ನೀರನ್ನು ಸಮುದ್ರಕ್ಕೆ ಒಯ್ಯುತ್ತವೆ. ಇವುಗಳನ್ನು ಬರಪೀಡಿತ ಚಿತ್ರದುರ್ಗ , ತುಮಕೂರು , ಕೋಲಾರಗಳತ್ತ ಏಕೆ ತಿರುಗಿಸಬಾರದು ಎನ್ನುವ ಆಶೆ ಯಾರಿಗೆ ತಾನೇ ಬಾರದು ? ಇದಕ್ಕಾಗಿ ಹಿಂದಿನಿಂದಲೂ ಹಲವಾರು ಯೋಜನೆಗಳು ಪ್ರಸ್ತಾಪಿಸಲ್ಪಟ್ಟಿವೆ. ಸಮುದ್ರ ಸೇರುವವರೆಗೂ ಎಲ್ಲಿಯೂ ಸಂಧಿಸದ ಎರಡು ನದಿಗಳು ತಮ್ಮದೇ ಆದ ವಿಭಿನ್ನ , ಪ್ರತ್ಯೇಕ ಜಲಾನಯನ ಹೊಂದಿರುತ್ತವೆ. ಕಾವೇರಿ-,ಕೃಷ್ಣಾ ಎರಡು ವಿಭಿನ್ನ ಜಲಾನಯನ ಹೊಂದಿರುವ ನದಿಗಳು. ಇಂತಹ ಎರಡು ವಿಭಿನ್ನ ಜಲಾನಯನಗಳನ್ನು ಸಂಪರ್ಕಿಸುವುದೇ  ನದಿ ಜೋಡಣೆ.

ನದಿ ಪಾತ್ರಗಳ ನಡುವೆ ನೀರನ್ನು  ವರ್ಗಾಯಿಸುವ ಸಾಧಕ ಬಾಧಕಗಳನ್ನು ಕುರಿತಾಗಿ ಕಳೆದ 40 ವರ್ಷಗಳಿಂದ ತೀವ್ರ ಚರ್ಚೆಗಳು ಸಾಗುತ್ತಿವೆ. 1970ರಲ್ಲಿ  ಸರ್ಕಾರದಲ್ಲಿ ನೀರಾವರಿ ಹಾಗು ವಿದ್ಯುಚ್ಚಕ್ತಿ ಮಂತ್ರಿಯಾಗಿದ್ದ  ಕೆ ಎಲ್ ರಾವ್ 'ರಾಷ್ಟ್ರೀಯ ನೀರಿನ ಜಾಲ' ಪ್ರಸ್ತಾವನೆಯನ್ನು ಮುಂದಿಟ್ಟರು. ಇದು ಗಂಗಾ ಕಾವೇರಿ ನದಿ ಜೋಡಣೆಯಂದು ಹೆಸರಾಯಿತು ಈ ಯೋಜನೆಯಲ್ಲಿ ಉತ್ತರದ ನದಿಯಾದ ಗಂಗಾ ಹಾಗು ದಕ್ಷಿಣದ ಕಾವೇರಿಯ ನದಿ ಪಾತ್ರಗಳನ್ನು ಬೆಸೆಯುವ ವಿವರಗಳಿದ್ದವು. ಪ್ರವಾಹ ಕಾಲದಲ್ಲಿ ಉಕ್ಕಿ ಹರಿಯುವ ಗಂಗಾನದಿಯನ್ನು ಬಿಹಾರದ ಪಾಟ್ನಾದ ಬಳಿ ತಿರುಗಿಸಿ 2640 ಕಿ ಮೀ ಉದ್ದದ ಕಾಲುವೆಯ ಮೂಲಕ  ದಕ್ಷಿಣದತ್ತ ಹರಿಸುವುದು ಈ ಪ್ರಸ್ತಾವನೆಯ ಪ್ರಮುಖ ಅಂಶವಾಗಿದ್ದಿತು . ಇದರಲ್ಲಿ ಗಂಗಾ ಬ್ರಹ್ಮಪುತ್ರಾ ಹಾಗು ಪಶ್ಚಿಮ ನದಿ ಜಾಲ ಯೋಜನೆಗಳು ಸಹ ಸೇರಿದ್ದವು.

ಇಂತಹುದೇ ಯೋಜನೆಯನ್ನು ಕ್ಯಾಪ್ಟನ್ ದಸ್ತೂರ್ ಸಹ ಚಿಂತಿಸಿದ್ದರು. ಇದು ಮಾಲೆ ಕಾಲುವೆ ಪ್ರಸ್ತಾವನೆ ಎಂದು ಸಾಕಷ್ಟು ಜನಪ್ರಿಯತೆಯನ್ನು ಸಹ ಪಡೆಯಿತು. ಈ ಯೋಜನೆಯಲ್ಲಿ ಉತ್ತರ ಭಾರತದ ಹಿಮಾಲಯ ಪ್ರದೇಶದಲ್ಲಿ 4200  ಕಿ.ಮೀ. ಉದ್ದ ಹಾಗು ದಕ್ಷಿಣ ಭಾರತದಲ್ಲಿ 9300 ಕಿ.ಮೀ. ಉದ್ದದ ಮಾಲೆ ರೂಪದ ಕಾಲುವೆಗಳ ಮೂಲಕ ನಡಿಗಳನ್ನು ಜೋಡಿಸುವ ಪ್ರಸ್ತಾವನೆಯಿದೆ. ಇವೆರಡೂ ನದಿ ಜೋಡಣೆಯ ಕಾಲುವೆ ವ್ಯವಸ್ಥೆಗಳನ್ನು ದೆಹಲಿ ಹಾಗು ಪಾಟ್ನಾದ ಬಳಿ ಕೊಳವೆ ಮಾರ್ಗದ ಮೂಲಕ ಜೋಡಿಸುವುದು ಸಹ ಇದರಲ್ಲಿ ಸೇರಿದೆ. ಕೆ.ಎಲ್.ರಾವ್ ಹಾಗು ದಸ್ತೂರ್ ಪ್ರಸ್ತಾವನೆಗಳು ದೇಶಾದ್ಯಂತ ಸುದ್ದಿ

ಮಾಡಿದ್ದವು ಇದರ ಪರಿಣಾಮವಾಗಿ 1980 ರಲ್ಲಿ ಈ ಎರಡು ಯೋಜನೆಗಳನ್ನೂ ಅಧ್ಯಯನ ನಡೆಸಿದ ಕೇಂದ್ರದ ನೀರಾವರಿ ಹಾಗು ಕೇಂದ್ರೀಯ ಜಲ ಆಯೋಗ 'ರಾಷ್ಟ್ರೀಯ ದೂರದೃಷ್ಟಿ ಯೋಜನೆ ( NPP) ಹೆಸರಿನಡಿ ಅಧ್ಯಯನ ನಡೆಸಿತು . ಇದರ ಫಲವಾಗಿ (1 ) ಹಿಮಾಲಯ ನದಿಜಾಲ ಹಾಗು (2) ದ್ವೀಪಕಲ್ಪ ( Peninsular) ನದಿಜಾಲದ ಪರಿಕಲ್ಪನೆ ಮೂಡಿ ಬಂದಿತು. ರಾಷ್ಟ್ರೀಯ ದೂರದೃಷ್ಟಿ ಯೋಜನೆಯನ್ನು ರಾಜಕೀಯ ಮಟ್ಟದಲ್ಲಿ ವಿಸ್ತೃತವಾಗಿ ಚರ್ಚಿಸಲಾಯಿತು. ಆಗಿನ ಪ್ರಧಾನಿ ಮಂತ್ರಿ ಶ್ರೀಮತಿ ಇಂದಿರಾಗಾಂಧಿ ಭಾರತ ದ್ವೀಪಕಲ್ಪದ ನದಿ ಜೋಡಣೆಯ ಆಗು ಹೋಗುಗಳನ್ನು ಕುರಿತಾಗಿ ತಕ್ಷಣವೇ ಕಾರ್ಯಪ್ರವೃತ್ತರಾಗುವಂತೆ ಸೂಚಿಸಿದರು ಏಕೆಂದರೆ ದಕ್ಷಿಣ ಭಾರತದ ನದಿ ಜೋಡಣೆಯನ್ನೂ ಬಾಹ್ಯ ನೆರವಿಲ್ಲದೆ , ಭಾರತ ತನ್ನ ಸ್ವಂತ; ಶಕ್ತಿಯಮೇಲೆ ಜಾರಿಗೆ ತರಬಹುದೆಂದು ತಜ್ಞರ ವರದಿ ತಿಳಿಸಿದ್ದಿತು.

ಇದರ ಮುಂದುವರಿದ ಕ್ರಮವಾಗಿ 1982ರಲ್ಲಿ ಭಾರತ ಸರ್ಕಾರ ರಾಷ್ಟ್ರೀಯ ಜಲ ಅಭಿವೃದ್ಧಿ ಏಜೆನ್ಸಿ NWDA (National Water Development Agency) ಯನ್ನೂ ರೂಪುದಳೆಯಿತು. ಅದು ಭಾರತದಲ್ಲಿ ನದಿ ಜೋಡಣೆಗಳ ಅಧ್ಯಯನ ನಡೆಸಿ ಅದರ ನಾನಾ ಘಟಕ/ಹಂತಗಳ ಕಾರ್ಯಸಾಧ್ಯತೆಯನ್ನು ನಿರ್ಧರಿಸುವ ಹೊಣೆ ಈ ಸಂಸ್ಥೆಯ ಹೆಗಲಿಗೇರಿತು. 2003 ರ ವೇಳೆಗೆ NWDA ಭಾರತದ ನದಿ ಪಾತ್ರಗಳಲ್ಲಿ ನೀರಿನ ಲಭ್ಯತೆ . ಸಮತೋಲನ ಕುರಿತಾದ ಸಮಗ್ರ ಅಧ್ಯಯನವನ್ನು ಪೂರ್ಣಗೊಳಿಸಿತು. ಇದರಲ್ಲಿ ಆರು ಹಂತದ ಕಾರ್ಯಸಾಧ್ಯ ಅಧ್ಯಯನಗಳು ಪೂರ್ಣಗೊಂಡಿದ್ದರೆ, ಇನ್ನು ಹದಿನೆಂಟು ವಿವಿಧ ಅಧ್ಯಯನ ಹಂತಗಳಲ್ಲಿವೆ.

ಡಿಸೆಂಬರ್ 2002 ರಂದು ಎನ್.ಡಿ.ಎ ಸರ್ಕಾರ "ಟಾಸ್ಕ ಫೋರ್ಸ್'' ರಚಿಸಿ ನದಿ ಪಾತ್ರಗಳ ಜೋಡಣೆಯ ಕ್ರಿಯಾ ಯೋಜನೆಯನ್ನು ಸಿದ್ಧಗೊಳಿಸಿ , ಅದಕ್ಕೆ ಬೇಕಾದ ವೆಚ್ಚ , ಬಂಡವಾಳ ಹೊದಿಕೆಯ ಮೂಲಗಳನ್ನು ಗುರುತಿಸಿ 2016 ರ ವೇಳೆಗೆ ಯೋಜನೆಯನ್ನು ಕೈಗೆತ್ತಿಕೊಳ್ಳುವಂತೆ ಮಾಡಲು ಬೇಕಾದ ವೇಳಾಪಟ್ಟಿಯನ್ನು ಸಿದ್ಧ ಪಡಿಸಬೇಕೆಂದು ಗೊತ್ತು ಪಡಿಸಲಾಯಿತು.

ಈ ಲೇಖನದಲ್ಲಿ ನದಿ ಜೋಡಣೆ ಕುರಿತಾದ ಸಾಧಕ ಬಾಧಕಗಳು ರಾಷ್ಟ್ರೀಯ ಮಟ್ಟದಲ್ಲಿ ಚರ್ಚೆಗೆ ಬರುವಂತೆ ಮಾಡಲು , ನದಿ ಜೋಡಣೆಯ ಸಾಧ್ಯತೆ , ವ್ಯಾವಹಾರಿಕ ಸಾಧ್ಯತೆ , ಪಾತ್ರಾಂತರ (inter basic) ನೀರು ತಿರುಗಿಸುವ ಆಳ ಅಗಲಗಳನ್ನು NWDA ಅಧ್ಯಯನ ನಡೆಸಿ ರಾಷ್ಟ್ರೀಯ ಮಹತ್ವದ ಹಲವಾರು ಸಂಗತಿಗಳನ್ನು ಸಾರ್ವಜನಿಕರೆದುರು ಚರ್ಚೆಗಿಟ್ಟಿತು. ಈ ವರದಿಯ ಮೇಲೆ ದೇಶದ ನಾನಾ ರಂಗದ ತಜ್ಞರು ತಮ್ಮ ಪರಿಣಿತ ಅಭಿಪ್ರಾಯಗಳನ್ನು ಮಂಡಿಸಲು , ನದಿ ಜೋಡಣೆ ಪರ್ಯಾಯ ಮಾರ್ಗೋಪಾಯಗಳನ್ನು ಚಿಂತಿಸಲು , ಸೂಚಿಸಲು ತಳಹದಿಯಾಯಿತು. ಇದರ ಪರಿಣಾಮವಾಗಿ NWDA ಪ್ರಸ್ತಾವನೆಗಳು ಮತ್ತು ರಾಷ್ಟ್ರೀಯ ದೂರದೃಷ್ಟಿ ಯೋಜನೆಯಲ್ಲಿ (National Respective plan) ಮೈದಳೆದವು. ಇದರಲ್ಲಿ ಎರಡು ಮುಖ್ಯವಾದ ಘಟಕಗಳಿವೆ.

(1) ಹಿಮಾಲಯ ನದಿಗಳ ಅಭಿವೃದ್ಧಿ
(2) ದ್ವೀಪಕಲ್ಪ ನದಿಗಳ ಅಭಿವೃದ್ಧಿ

## (1) ಹಿಮಾಲಯ ನದಿಗಳ ಅಭಿವೃದ್ಧಿ

ಗಂಗಾ ,ಬ್ರಹ್ಮಪುತ್ರಾ ಹಾಗು ಅವುಗಳ ಮುಖ್ಯ ಉಪನದಿಗಳ ನೀರನ್ನು ಭಾರತ ಮತ್ತು ನೇಪಾಳಗಳಲ್ಲಿ ಸಂಗ್ರಹಿಸಿ ಮಾನ್ಸೂನ್ ಅವಧಿಯ ಪ್ರವಾಹದ ಹರಿವನ್ನು ನಿಯಂತ್ರಿಸಿ , ಜಲವಿದ್ಯುತ್ ಹಾಗು ನೀರಾವರಿ ಸೌಕರ್ಯಗಳಿಗೆ ಬಳಸಿಕೊಳ್ಳಲು ಉದ್ದೇಶಿಸಲಾಗಿದೆ. ಮಳೆಗಾಲದಲ್ಲಿ ಅಧಿಕ ನೀರನ್ನು ಹೊತ್ತು ತರುವ ಕೋಸಿ ನದಿಯನ್ನು ಕಾಲುವೆಗಳ ಮೂಲಕ ಹರಿಸಲು ನಿಶ್ಚಯಿಸಲಾಗಿದೆ. ಪಶ್ಚಿಮದಲ್ಲಿರುವ ಗಂಡಕಿ ಮತ್ತು ಘಗ್ರಾಗಳನ್ನು ಬೆಸೆಯುವ ಪ್ರಸ್ತಾವನೆಗಳಿವೆ. ಈ ಘಟಕದಲ್ಲಿರುವ ಮುಖ್ಯ ಗುರಿಗಳೆಂದರೆ -
(೧) ಬ್ರಹ್ಮಪುತ್ರಾ ಮತ್ತು ಗಂಗಾ ನದಿಗಳನ್ನು ಸೇರಿಸಿ ಗಂಗಾನದಿ ಹರಿವಿನ ಇಳಿಕೆ ಕಾಲದಲ್ಲಿನ ನೀರಿನ ಪ್ರಮಾನವನ್ನು ಕಾಯ್ದುಕೊಳ್ಳುವುದು / ಹೆಚ್ಚಿಸುವುದು.

(೨) ಗಂಗಾ ಯಮುನಾ ನಡಿಗಳನ್ನು ಸೇರಿಸಿ ಅವುಗಳಿಂದ ದಕ್ಕುವ ಹೆಚ್ಚುವರಿ ನೀರನ್ನು ಹರಿಯಾಣ , ರಾಜಸ್ಥಾನ ಹಾಗು ಗುಜರಾತ್‌ನ ಬರಪೀಡಿತ ಪ್ರದೇಶಗಳಿಗೆ ವರ್ಗಾಯಿಸುವುದು.

(೩) ಗಂಗಾ ನದಿಯ ಮೇಲೆ 30ಮೀ ಗಿಂತಲೂ ಹೆಚ್ಚು ಎತ್ತರವಿಲ್ಲದಂತೆ ನೀರನ್ನು ಏತ ನೀರಾವರಿ ಯೋಜನೆಗಳ ಮೂಲಕ ಎತ್ತರದ ಪ್ರದೇಶಕ್ಕೆ ಒಯ್ದು ಉತ್ತರ ಪ್ರದೇಶ ಹಾಗು ಬಿಹಾರದ ದಕ್ಷಿಣ ಪ್ರದೇಶಗಳಿಗೆ ನೀರುಣಿಸುವುದು.

(೪) ನೇಪಾಳದ ತೆರೈ ಪ್ರದೇಶವನ್ನು ಸಂಪೂರ್ಣವಾಗಿ ನೀರಾವರಿಗೆ ಒಳತಂದು , 30 ದಶಲಕ್ಷ ಯುನಿಟ್ (30 Msclion k w ) ಜಲವಿದ್ಯುತ್ ಉತ್ಪಾದಿಸುವುದು .

(೫) ಗಂಗಾ-ಬ್ರಹ್ಮಪುತ್ರಾ ನದಿಗಳನ್ನು ಜೋಡಿಸುವುದರಿಂದ ೩.೯೭೨ ಬಿ.ಎಂಸಿ (140 ಟಿ.ಎಂ.ಸಿ) ಅಧಿಕ ನೀರು ದಕ್ಕುತ್ತದೆ. ಇದನ್ನು ಹರಿಯಾಣ-ಪಂಜಾಬ್- -ರಾಜಸ್ಥಾನ- ಗುಜರಾತ್ ಹೊರತಾದ ಇತರ ಗಂಗಾ- ಬ್ರಹ್ಮಪುತ್ರಾ  ನದಿ ಬಯಲಿನ ಪ್ರದೇಶಗಳಿಗೆ ಹಂಚುವುದು . ಈ ಹೆಚ್ಚುವರಿ ನೀರಿನಲ್ಲಿ 1120 ಘನ .ಮೀ/ಸೆಕೆಂಡ್ ಪ್ರಮಾಣದ ನೀರನ್ನು ಕಲ್ಕತ್ತಾ ಬಂದರಿಗೆ ಸಾಗಿಸಿ ಜಲಮಾರ್ಗ ಸೃಷ್ಟಿಸುವುದು. ಈ ಯೋಜನೆಯಿಂದ ಭಾರತವಲ್ಲದೆ ನೇಪಾಳ ಮತ್ತು ಬಾಂಗ್ಲಾಗಳಿಗೂ ನೆರವಾಗಲಿದೆ.

## (೨) ದ್ವೀಪಕಲ್ಪ ನದಿಗಳ ಅಭಿವೃದ್ಧಿ

**ಘಟಕ -1 :** ಭಾರತದ ದ್ವೀಪಕಲ್ಪದ ಭಾಗದಲ್ಲಿರುವ ನದಿಗಳಲ್ಲಿ ಮಹಾನದಿ ಮತ್ತು ಗೋದಾವರಿಗಳಲ್ಲಿ ಮಾತ್ರ ಈಗಿರುವ ಎಲ್ಲ ಯೋಜನೆಗಳ ಅಗತ್ಯಗಳನ್ನೂ ಪೂರೈಸಿದ ನಂತರವೂ ಉಳಿಯಬಲ್ಲ ಹೆಚ್ಚುವರಿ ನೀರಿದೆಯೆಂದು ಪರಿಗಣಿಸಲಾಗಿದೆ.ಈ ಯೋಜನೆಯಲ್ಲಿ -

(೧) ಮಹಾನದಿ ಹಾಗು ಗೋದಾವರಿ ನದಿಗಳ ಕೊನೆಭಾಗದಲ್ಲಿ ನೀರನ್ನು ಸಂಗ್ರಹಿಸುವುದು .ಮಹಾನದಿಯ ನೀರನ್ನು ಗೋದಾವರಿಗೆ ವರ್ಗಾಯಿಸುವುದು .ಮುಂದಿನ ಹಂತದಲ್ಲಿ ಈ ನೀರನ್ನು ಗೋದಾವರಿಯಿಂದ ಕೃಷ್ಣ ಪೆನ್ನಾರ್ ಹಾಗು ಕಾವೇರಿ ನದಿ ಪಾತ್ರಗಳಿಗೆ ತಿರುಗಿಸುವುದು.
(೨) ಮಹಾನದಿ ಹಾಗು ಗೋದಾವರಿ ಪುರ್ವಾಭಿಮುಖ ನದಿಗಳಾಗಿದ್ದು , ಮಹಾನದಿಯಿಂದ ಗೋದಾವರಿಗೆ ಗುರುತ್ವದ ಮೂಲಕ ನೀರನ್ನು ಹರಿಸಲು ಸಾಧ್ಯ .
(೩) ಗೋದಾವರಿಯಿಂದ ಕೃಷ್ಣ ಪಾತ್ರಕ್ಕೆ ನೀರನ್ನು ಅಂಶಿಕವಾಗಿ ಗುರುತ್ವದಿಂದ ಅಂಶಿಕವಾಗಿ ಏತ ವ್ಯವಸ್ಥೆಯಿಂದ  ಗರಿಷ್ಠ 120ಮೀ ಎತ್ತರ ನೀರನ್ನು ಎತ್ತಿ ವರ್ಗಾಯಿಸಬೇಕು. ಇದರಿಂದ ನೀರಿನ ಕೊರತೆಯ ಮಹಾರಾಷ್ಟ್ರ , ಕರ್ನಾಟಕ , ಅಂಧ್ರ,ಹಾಗು ತಮಿಳುನಾಡುಗಳಿಗೆ  ಪರಿಹಾರ ಒದಗಿಸುವುದು.

**ಘಟಕ-2 :** ದ್ವೀಪಕಲ್ಪದ ನದಿ ಜೋಡಣೆ ಎರಡನೇ  ಘಟಕದಲ್ಲಿ ಪಶ್ಚಿಮವಾಹಿನಿ  ನಡಿಗಳನ್ನು ಸಹ ಪರಿಗಣಿಸಲಾಗಿದೆ. ಇದರಲ್ಲಿ
(೧) ಕೇರಳ ರಾಜ್ಯದಲ್ಲಿ ಹರಿಯುತ್ತಿರುವ ಪಶ್ಚಿಮಾಭಿಮುಖ  ನದಿಗಳನ್ನು ಪೂರ್ವಕ್ಕೆ ತಿರುಗಿಸಿ ಕೇರಳದ ನೀರಾವರಿ ಪ್ರದೇಶ ಹೆಚ್ಚಿಸಿ , ತಮಿಳುನಾಡಿನ ಒಣ ಬೇಸಾಯದ ಪ್ರದೇಶವನ್ನು ನೀರಾವರಿಗೆ ತರುವುದು.

**ಘಟಕ-3 :** ಪಶ್ಚಿಮ ಕರಾವಳಿಗೆ ಹೊಂದಿಕೊಂಡಂತೆ ಹಲವಾರು ಸಣ್ಣ ಮಧ್ಯಮ ನದಿಗಳು ಪಶ್ಚಿಮಾಭಿಮುಖವಾಗಿ ಹರಿದು ಅರಬ್ಬಿ ಸಮುದ್ರ ಸೇರುತ್ತವೆ. ಇವುಗಳಿಗೆ ಅಲ್ಲಲ್ಲಿ ಒಡ್ಡುಗಳನ್ನು  ಕಟ್ಟಿ ನೀರನ್ನು ಸಂಗ್ರಹಿಸುವುದು ,ಉಳಿದೆಡೆ ಸಣ್ಣ ಮಟ್ಟದ ನದಿಗಳನ್ನು ಜೋಡಿಸುವುದು . ಇದಕ್ಕಾಗಿ ತಾಪಿಯ ದಕ್ಷಿಣ ಹಾಗು ಮುಂಬಯಿಯ ಉತ್ತರದ ನಡಿಗಳನ್ನು ಪರಿಗಣಿಸಲಾಗಿದೆ. ಇದರಿಂದ ತಾಪಿ ಹಾಗು ನರ್ಮದಾ ನದಿಗಳ ಸ್ವಲ್ಪ ನೀರನ್ನು ವರ್ಗಾಂತರಿಸಲು  ಸಾಧ್ಯವಿದ್ದು  ಸೌರಾಷ್ಟ್ರ  ಹಾಗು ಕಛ್ ಪ್ರದೇಶದ ಕೆಲ ಪ್ರದೇಶಗಳನ್ನು ನೀರಾವರಿಯಡಿ ತರಲು ಸಾಧ್ಯ .ಇದರಿಂದ ಮುಂಬಯಿಯಂತಹ ಮಹಾನ್ ನಗರ ಸೇರಿದಂತೆ ಪಶ್ಚಿಮ ಕರಾವಳಿಯ ಇತರ ನಗರಗಳಿಗೂ ಕುಡಿಯುವ ನೀರನ್ನು ಒದಗಿಸಲು ಸಾಧ್ಯ .

**ಘಟಕ-4 :** ಇದರಲ್ಲಿ ಹಿಮಾಲಯದ ದಕ್ಷಿಣ ಭಾಗದಲ್ಲಿರುವ ಯುಮುನಾ ನದಿಯ ಉಪನದಿಗಳಾದ ಕೇಣ ಹಾಗು ಚಂಬಲ್ ನದಿಗಳನ್ನು ಜೋಡಿಸುವುದು ಮತ್ತು ಇತರ ಸಣ್ಣ ಪ್ರಮಾಣದ ಜಲಾಶಯಗಳನ್ನು ನಿರ್ಮಿಸುವುದು ಇದರೊಂದಿಗೆ ಯುಮುನಾ ನದಿಗೆ ಪಂಚನಾಡ್ ಬಳಿ ಆಣೆಕಟ್ಟು ಕಟ್ಟುವುದು . ಇದರಿಂದ ಮಧ್ಯಪ್ರದೇಶ ಮತ್ತು ರಾಜಸ್ಥಾನದ ಪ್ರದೇಶಗಳನ್ನು ನೀರಾವರಿಯಡಿಯಲ್ಲಿ ತರಬಹುದು.

ದ್ವೀಪಕಲ್ಪದ ನದಿ ಅಭಿವೃದ್ಧಿ ಯೋಜನೆಯಿಂದ 84 ಕಿ.ಮೀ ಉದ್ದದ ನದಿ ಪಾತ್ರ ಬಳಕೆಗೆ ಬಂದು ಒರಿಸ್ಸಾ, ಆಂಧ್ರ, ಮಹಾರಾಷ್ಟ್ರ ಕರ್ನಾಟಕ , ತಮಿಳುನಾಡು, ಮಧ್ಯಪ್ರದೇಶಗಳ ಒಣ ಪ್ರದೇಶಗಳ 13 ದಶಲಕ್ಷ ಹೆಕ್ಟೇರ್ ಗಳನ್ನು ನೀರಾವರಿಗೆ ತರುವುದು . ಕೆ.ಎಲ್.ರಾವ್. ಗಂಗಾ ಕಾವೇರಿ ಯೋಜನೆಯಲ್ಲಿ ಗಂಗಾ-ಕಾವೆರಿಗಳು ಏತ ವ್ಯವಸ್ಥೆಯ ಮೂಲಕ ಸಂಪರ್ಕಗೊಂಡಿದ್ದವು. ಅದರ NWDA ಪರಿಷ್ಕೃತ ಪ್ರಸ್ತಾವನೆಯಲ್ಲಿ ನದಿ ಪಾತ್ರಗಳ ನಡುವಿನ ನೀರಿನ ವರ್ಗಾವಣೆ ಕೆಲ ಭಾಗಗಳಲ್ಲಿ ಹೊರತು ಪಡಿಸಿದರೆ ಉಳಿದಂತೆ ಗುರುತ್ವಾಕರ್ಷಣೆಯ ಮೂಲಕ ಆಗುತ್ತದೆ. ಇದರಲ್ಲಿ ಎಲ್ಲಿಯೂ ನೀರನ್ನು 120 ಮೀ ಗಿಂತಲೂ ಅಧಿಕ ಎತ್ತರಕ್ಕೆ ತರಿಸುವುದಿಲ್ಲ.




Source: National Water Development Agency

ಮೇಲೆ ನೀಡಿರುವ ನಕಾಶೆಯಲ್ಲಿ ಭಾರತದ ನದಿ ಜೋಡಣೆಯ ಒಟ್ಟಾರೆ ನೋಟ ಬಿಂಬಿತವಾಗಿದೆ. ಮುಂದಿನ ಕೋಷ್ಟಕದಲ್ಲಿ ಯಾವ ನದಿ ಜಾಲದಲ್ಲಿ ಎಷ್ಟು ನೀರು ಲಭ್ಯ , ನದಿಗಳ ಸಂಪರ್ಕ ಸಾಧಿಸಿದ್ದೇ ಆದರೆ ಹೆಚ್ಚುವರಿ ಎಷ್ಟು ಜಲಾಶಯಗಳನ್ನು ಕಟ್ಟಬೇಕಾಗುತ್ತದೆ ಎಂಬ ವಿವರಗಳಿವೆ.

**ಕೋಷ್ಟಕ -೨ : ನದಿ ಸಂಪರ್ಕ ಜಾಲಗಳು ಮತ್ತು ವರ್ಗಾಯಿಸಬಹುದಾದ ನೀರಿನ ಪ್ರಮಾಣ**

| ವಲಯ | ಗುಂಪು | ಸಂಪರ್ಕಗಳು |
|---|---|---|
| **ಹಿಮಾಲಯ** | ಎಚ್.1 | ಬ್ರಹ್ಮಪುತ್ರಾ **(೪೩ ಬಿ.ಸಿ.ಎಂ)** -ಗಂಗಾ**(೩೮ ಬಿ.ಸಿ.ಎಂ)**-ಮಹಾನದಿ **(೨೦ಬಿ.ಸಿ.ಎಂ)** |
| | | ಗಂಗಾ ಕೊಳ್ಳ (ಉತ್ತರ)ದ **(೬೬ ಬಿ.ಸಿ.ಎಂ)** ನೀರು , ಕೋಸಿ-ಮೇಚಿ, ಕೋಸಿ-ಗಾಘ್ರಾ , ಗಂಡಕ-ಗಂಗಾ ಸಂಪರ್ಕಗಳ |
| | ಎಚ್.2 | ಮೂಲಕ ನೀರಿನ ಮರು ವಿತರಣೆ |
| | | ಗಂಗಾ ಕೊಳ್ಳ (ದಕ್ಷಿಣ)ದ **(೮ ಬಿ.ಸಿ.ಎಂ )** ನೀರು ,ಚುನಾರ್-ಸೋನಾ ಬ್ಯಾರೇಜ್, ಸೋನಾ ಬ್ಯಾರೇಜ್-ಸೋನಾ |
| | ಎಚ್.3 | ಉಪನದಿಗಳ ಮೂಲಕ ನೀರಿನ ಮರು ವಿತರಣೆ |
| | | ಗಂಗಾ-ಯಮುನಾ-ಲೂನಿ-ಸಬರಮತಿ. ಗಾಘ್ರಾ-ಯಮುನಾ**(೪.೧ ಬಿ.ಸಿ.ಎಂ)** , ಸಾರ್ದಾ-ಯಮುನಾ **(೧೪.೯** |
| | ಎಚ್.4 | **ಬಿ.ಸಿ.ಎಂ)** , ಯಮುನಾ-ಲೂನಿ **(೫.೯ ಬಿ.ಸಿ.ಎಂ)** , ಲೂನಿ-ಸಬರಮತಿ**(೨ ಬಿ.ಸಿ.ಎಂ)** ಮೂಲಕ ವರ್ಗಾವಣೆ |
| | | ಯೋಜನೆಯ ಒಟ್ಟು ನೀರಿನ ಪ್ರಮಾಣ = **೧೦೭ ಬಿ.ಸಿ.ಎಂ** , ಏತ ವ್ಯವಸ್ಥೆಗಳು=೪ |
| | | ಆಣೆಕಟ್ಟುಗಳು=೬ , ಪ್ರಭಾವಿತ ಪ್ರದೇಶ/ದೇಶಗಳು = ಭಾರತ,ನೇಪಾಳ, ಭೂತಾನ್ |
| **ದ್ವೀಪಕಲ್ಪ** | ಪಿ.1 | ಮಹಾನದಿ(ಮಣಿಭದ್ರಾ)-ಗೋದಾವರಿ (ಧವಳೇಶ್ವರಂ) ( **೬.೫ ಬಿ.ಸಿ.ಎಂ)** |
| | ಪಿ.೧.ಎ | ಕೃಷ್ಣಾ-ಪೆನ್ನಾರ್-ವೈಗೈ-ಗುಂಡಾರ್ **(೪೩ ಬಿ.ಸಿ.ಎಂ)** |
| | ಪಿ.೧. ಬಿ | ಗೋದಾವರಿ(ಇಚಂಪಲ್ಲಿ ಕೆಳ ಆಣೆಕಟ್ಟೆ)-ನಾಗಾರ್ಜುನ ಸಾಗರ ಜಲಾಶಯ ಹಿನ್ನೀರು **(೪.೪ ಬಿ.ಸಿ.ಎಂ)** |
| | ಪಿ.೧.ಸಿ | ಗೋದಾವರಿ(ಇಚಂಪಲ್ಲಿ)-ಕೃಷ್ಣಾ **(೯.೮ ಬಿ.ಸಿ.ಎಂ)** |
| | ಪಿ.೧.ಡಿ | ಗೋದಾವರಿ(ಪೋಲಾವರಂ)-ಕೃಷ್ಣಾ(ವಿಜಯವಾಡ) **(೩.೩ ಬಿ.ಸಿ.ಎಂ)** |
| | ಪಿ.೧.ಇ | ಕೃಷ್ಣಾ(ಆಲಮಟ್ಟಿ)-ಪೆನ್ನಾರ್ **(೨ ಬಿ.ಸಿ.ಎಂ)** |
| | ಪಿ.೧.ಎಫ್ | ಕೃಷ್ಣಾ (ಶ್ರೀಶೈಲಂ)-ಪೆನ್ನಾರ್ **(೨.೧ ಬಿ.ಸಿ.ಎಂ)** |
| | ಪಿ.೧.ಜಿ | ಕೃಷ್ಣಾ(ನಾಗಾರ್ಜುನ ಸಾಗರ)-ಪೆನ್ನಾರ್(ಸೋಮಶಿಲಾ) **(೮.೬ ಬಿ.ಸಿ.ಎಂ)** |
| | ಪಿ.೧.ಎಚ್ | ಪೆನ್ನಾರ್(ಸೋಮಶಿಲಾ)-ಕಾವೇರಿ (ಗ್ರಾಂಡ್ ಆಣೆಕಟ್ಟು) **(೩.೮ ಬಿ.ಸಿ.ಎಂ)** |
| | ಪಿ.೧.ಐ | ಕಾವೇರಿ(ಕಟ್ಟಳೈ)-ವೈಗೈ -ಗುಂಡಾರ್ **( ೨.೨ ಬಿ.ಸಿ.ಎಂ)** |
| | **ಪಿ.೨.** | **ಯಮುನಾ ಕೊಳ್ಳ (ದಕ್ಷಿಣ) (ಒಟ್ಟು ೧.೮ ಬಿ.ಸಿ.ಎಂ)** |
| | ಪಿ.೨.೧ | ಕೇಣ್-ಬೇಟ್ವಾ **(೧.೧ ಬಿ.ಸಿ.ಎಂ)** |
| | ಪಿ.೨.೨. | ಪಾರ್ವತಿ-ಕಾಳಿಸಿಂಧ್ -ಚಂಬಲ್ **(೦.೭ ಬಿ.ಸಿ.ಎಂ)** |
| | **ಪಿ.೩** | **ಗುಜರಾತ್-ಮಹಾರಾಷ್ಟ್ರ (ಒಟ್ಟು ೧.೬ ಬಿ.ಸಿ.ಎಂ)** |
| | ಪಿ.೩.೧ | ಪಾರ್-ತಪತಿ-ನರ್ಮದಾ **(೦.೭ ಬಿ.ಸಿ.ಎಂ)** |
| | ಪಿ.೩.ಬಿ | ದಮನ್ ಗಂಗಾ-ಪಿಂಜಾಲ್ **( ೦.೯ ಬಿ.ಸಿ.ಎಂ)** |
| | **ಪಿ.೪** | ಕರ್ನಾಟಕ **(ಒಟ್ಟು ೦.೪ ಬಿ.ಶಿ.ಎಂ)** |
| | ಪಿ.೪.೧ | ಬೇಡ್ತಿ-ವರದಾ **(೦.೨ ಬಿ.ಸಿ.ಎಂ - ೧೨೫ ಮೀ ಏತ)** |
| | ಪಿ.೪.೨ | ನೇತ್ರಾವತಿ-ಹೇಮಾವತಿ **(೦.೨ ಬಿ.ಸಿ.ಎಂ-೮೧ ಮೀ ಏತ)** |
| | **ಪಿ.೫** | **ಕೇರಳ-ತಮಿಳುನಾಡು (ಒಟ್ಟು -೦.೬ ಬಿ.ಸಿ.ಎಂ)** |
| | ಪಿ.೫.೧ | ಪಂಬಾ-ಆಚನಕೋವಿಲ್-ವೈಪ್ಪಾರ್ **(೦.೬ ಬಿ.ಸಿ.ಎಂ)** |
| | | ದ್ವೀಪಕಲ್ಪದ ನದಿ ತಿರುವು ಯೋಜನೆಗಳಿಗಾಗಿ ಈಗ ಇರುವುದರೊಂದಿಗೆ ಇನ್ನು ೨೦ ಹೆಚ್ಚುವರಿ ಆಣೆಕಟ್ಟುಗಳನ್ನು ಕಟ್ಟಬೇಕಾಗುತ್ತದೆ. ಇವುಗಳಲ್ಲಿ ೭ ದೊಡ್ಡ ಆಣೆಕಟ್ಟುಗಳಿರುತ್ತವೆ. |

## ಕೋಷ್ಟಕ -೩ : ಜಲಾಶಯಗಳ ಸಾಮರ್ಥ್ಯ : ಈಗಿರುವಂತೆ -ಮುಂದೆ ಬೇಕಾಗಿರುವಂತೆ

**ಜಲಾಶಯಗಳ ಸಂಗ್ರಹ ಸಾಮರ್ಥ್ಯ**

ಈಗಿರುವ ಮಧ್ಯಮ ಹಾಗೂ ಬೃಹತ್ ಆಣೆಕಟ್ಟುಗಳ ಒಟ್ಟು ಸಂಗ್ರಹ ಸಾಮರ್ಥ್ಯ(ಬಿ.ಸಿ.ಎಂ) =೧೭೭
ನಿರ್ಮಾಣ ಹಂತದಲ್ಲಿರುವ ಆಣೆಕಟ್ಟುಗಳ ಸಂಗ್ರಹ ಸಾಮರ್ಥ್ಯ(ಬಿ.ಸಿ.ಎಂ) = ೭೬
ಪ್ರಸ್ತಾವಿತ ಆಣೆಕಟ್ಟುಗಳ ಸಂಗ್ರಹ ಸಾಮರ್ಥ್ಯ (ಬಿ.ಸಿ.ಎಂ) = ೭೦

**ಜಲಾಶಯಗಳ ಒಟ್ಟು ಸಂಗ್ರಹ ಸಾಮರ್ಥ್ಯ (ಬಿ.ಸಿ.ಎಂ) = ೩ ೨ ೩**

ಹೂಳಿನಿಂದ ಸಂಗ್ರಹ ಸಾಮರ್ಥ್ಯದ ಇಳಿಕೆ - ೨೦೫೦ ರಲ್ಲಿ (ಬಿ.ಸಿ.ಎಂ) = ೫೨
ಜಲಾಶಯಗಳ ನಿವ್ವಳ ಸಂಗ್ರಹ ಸಾಮರ್ಥ್ಯ -೨೦೫೦ ರಲ್ಲಿ (ಬಿ.ಸಿ.ಎಂ) = ೨೭೦
ಬೇಕಾಗಿರುವ ಸಂಗ್ರಹ ಸಾಮರ್ಥ್ಯ-೨೦೫೦ ರಲ್ಲಿ (ಬಿ.ಸಿ.ಎಂ) = ೪೫೦
ಸಾಧಿಸಬೇಕಾಗಿರುವ ಹೆಚ್ಚುವರಿ ಸಂಗ್ರಹ ಸಾಮರ್ಥ್ಯ-೨೦೫೦ ರಲ್ಲಿ (ಬಿ.ಸಿ.ಎಂ) =೧೮೦
ಈಗಿರುವ ಒಟ್ಟು ದೊಡ್ಡ ಆಣೆಕಟ್ಟುಗಳು(ಸಂಖ್ಯೆ) =೪೦೦೦
ಹೆಚ್ಚುವರಿ ನಿರ್ಮಿಸಬೇಕಾಗುವ ದೊಡ್ಡ ಆಣೆಕಟ್ಟುಗಳು(ಸಂಖ್ಯೆ) = ೨೫೦೦

## ಕೋಷ್ಟಕ -೪ : ನದಿ ಜೋಡಣೆ/ತಿರುವು ಯೋಜನೆಯ ಅಂದಾಜು ವೆಚ್ಚ ಮತ್ತು ಲಾಭಗಳು (ಹಿಮಾಲಯ ಪ್ರದೇಶ)

NWDA (ರಾಷ್ಟ್ರೀಯ ಜಲ ಅಭಿವೃದ್ಧಿ ಏಜೆನ್ಸಿ) ಸಲ್ಲಿಸಿದ ನದಿ ಜೋಡಣೆಯ ವಿವರಗಳು ಮುಂದಿನ ಕೋಷ್ಟಕದಲ್ಲಿವೆ..

| **ಹಿಮಾಲಯ ಪ್ರದೇಶ** | **ಅಂದಾಜು ವೆಚ್ಚ ೨೦೦೩-೨೦೦೪ (ಕೋಟಿಗಳಲ್ಲಿ)** | **ವಾರ್ಷಿಕ ನೀರಾವರಿ ಲಕ್ಷ ಹೆಕ್ಟೇರ್** | **ವಿದ್ಯುತ್ ಉತ್ಪಾದನೆ MW** | **ವಿದ್ಯುತ್ ಬಳಕೆ MW** | **ಗೃಹ ಮತ್ತು ಕೈಗಾರಿಕೆ ದಶಲಕ್ಷ ಘನ ಮೀ** |
|---|---|---|---|---|---|
| ಬ್ರಹ್ಮಪುತ್ರಾ-ಗಂಗಾ (ಮಾನಸ-ಸಂಕೋಶ್-ತೀಸ್ತಾ-ಗಂಗಾ) | 57764.680 | 6.540 | 5287.000 | 0.000 | 0.000 |
| ಕೋಸಿ-ಘಾಗ್ರಾ | 17629.620 | 10.580 | 0.000 | 0.000 | 0.000 |
| ಗಂಡಕಾ-ಗಂಗಾ | 28181.180 | 40.400 | 3245.000 | 0.000 | 700.000 |
| ಘಾಗ್ರಾ-ಯಮುನಾ | 79745.620 | 26.650 | 10884.000 | 0.000 | 1382.000 |
| ಸಾರ್ದಾ-ಯಮುನಾ | 23395.790 | 3.750 | 3600.000 | 0.000 | 360.000 |
| ಯಮುನಾ-ರಾಜಸ್ಥಾನ | 11435.520 | 2.877 | 0.000 | 0.000 | 57.000 |
| ರಾಜಸ್ಥಾನ-ಸಬರಮತಿ | 11608.320 | 7.390 | 0.000 | 0.000 | 282.000 |
| ಚುನಾರ್-ಸೋನೆ ಬ್ಯಾರೆಜ್ | 4807.460 | 0.670 | 0.000 | 251.000 | 0.000 |
| ಸೋನೆ ಆಣೆಕಟ್ಟು-ಗಂಗಾ ನದಿಯ ದಕ್ಷಿಣದ ಉಪನದಿಗಳು | 7757.970 | 3.070 | 3600.000 | 0.000 | 6250.000 |
| ಗಂಗಾ-ದಾಮೋದರ-ಸುವರ್ಣರೇಖಾ | 20189.840 | 8.470 | 0.000 | 1278.000 | 484.000 |
| ಸುವರ್ಣರೇಖಾ-ಮಹಾನದಿ | 10223.100 | 0.545 | 9.000 | 715.000 | 0.000 |
| ಕೋಸಿ-ಮೇಚಿ | 16417.990 | 4.740 | 3180.000 | 0.000 | 24.000 |
| ಫರಕ್ಕಾ-ಸುಂದರಬನ | 625.390 | 1.500 | 0.000 | 0.000 | 184.000 |
| ಬ್ರಹ್ಮಪುತ್ರಾ-ಗಂಗಾ (ಜೋಗಿಘೋಪ-ತೀಸ್ತಾ-ಗಂಗಾ)-೧ ರ ಪರ್ಯಾಯ | 45442.690 | 5.940 | 1115.000 | 1059.000 | 215.000 |

| | | | | | |
|---|---|---|---|---|---|
| **ಮೊತ್ತ-ಹಿಮಾಲಯ ಪ್ರದೇಶ ( ೧ ರ ಪರ್ಯಾಯ ೧೪ ನ್ನು ಹೊರತುಪಡಿಸಿ)** | **289782.480** | **117.182** | 29805.000 | 2244.000 | 9723.000 |
| **ಮೊತ್ತ-ಹಿಮಾಲಯ ಪ್ರದೇಶ ( ೧ ರ ಬದಲು ೧೪ ನ್ನು ಪರಿಗಣಿಸಿ )** | **277460.490** | **116.582** | 25633.000 | 3303.000 | 9938.000 |

**ಕೋಷ್ಟಕ -೫ : ನದಿ ಜೋಡಣೆ/ತಿರುವು ಯೋಜನೆಯ ಅಂದಾಜು ವೆಚ್ಚ ಮತ್ತು ಲಾಭಗಳು (ದ್ವೀಪಕಲ್ಪ ಪ್ರದೇಶ)**

| ದ್ವೀಪಕಲ್ಪ ಪ್ರದೇಶ | ಅಂದಾಜು ವೆಚ್ಚ ೨೦೦೩-೨೦೦೪ (ಕೋಟಿಗಳಲ್ಲಿ) | ವಾರ್ಷಿಕ ನೀರಾವರಿ ಲಕ್ಷ ಹೆಕ್ಟೇರ್ | ವಿದ್ಯುತ್ ಉತ್ಪಾದನೆ MW | ವಿದ್ಯುತ್ ಬಳಕೆ MW | ಗೃಹ ಮತ್ತು ಕೈಗಾರಿಕೆ ದಶಲಕ್ಷ ಘನ ಮೀ |
|---|---|---|---|---|---|
| ಮಹಾನದಿ(ಮಣಿಭದ್ರಾ)-ಗೋದಾವರಿ(ಧವಳೇಶ್ವರಂ) | 16348.970 | 4.540 | 70.000 | 0.000 | 0.000 |
| ಗೋದಾವರಿ(ಇಚಂಪಲ್ಲಿಂ-ಕೆಳಗಡೆ ಆಣೆಕಟ್ಟೆ) - ಕೃಷ್ಣಾ(ನಾಗಾರ್ಜುನ ಸಾಗರ - ಹಿಂಭಾಗದ ಸರೋವರ) | 11506.780 | 3.190 | 27.000 | 1705.000 | 0.000 |
| ಗೋದಾವರಿ(ಇಚಂಪಲ್ಲಿಂ) -ಕಷ್ಣಾ (ನಾಗಾರ್ಜುನ ಸಾಗರ ) | 27653.380 | 6.500 | 0.000 | 177.000 | 0.000 |
| ಗೋದಾವರಿ(ಪೋಲಾವರಂ)-ಕೃಷ್ಣಾ(ವಿಜಯವಾಡ) | 10419.090 | 5.820 | 0.000 | 0.000 | 0.000 |
| ಕೃಷ್ಣಾ(ಆಲಮಟ್ಟಿ)-ಪೆನ್ನಾರ್ | 8984.700 | 2.350 | 0.000 | 0.000 | 0.000 |
| ಕೃಷ್ಣಾ(ಶ್ರೀಶೈಲಂ)-ಪೆನ್ನಾರ್ | 118.590 | 0.000 | 17.000 | 0.000 | 0.000 |
| ಕೃಷ್ಣಾ(ನಾಗಾರ್ಜುನ ಸಾಗರ)-ಪೆನ್ನಾರ್(ಸೋಮಶಿಲಾ) | 9254.580 | 5.810 | 120.000 | 0.000 | 0.000 |
| ಪೆನ್ನಾರ್(ಸೋಮಶಿಲಾ)-ಕಾವೇರಿ (ಗ್ರಾಂಡ್ ಆಣೆಕಟ್ಟು) | 7082.420 | 3.530 | 0.000 | 0.000 | 1155.000 |
| ಕಾವೇರಿ(ಕಟ್ಟಳೈ)-ವೈಗೈ -ಗುಂಡಾರ್ | 5181.050 | 3.530 | 0.000 | 0.000 | 109.000 |
| ಕೇಣ-ಬೇಟ್ವಾ | 4263.040 | 4.970 | 72.000 | 0.000 | 12.000 |
| ಪಾರ್ವತಿ-ಕಾಳಿಸಿಂಧ್-ಚಂಬಲ್ | 4526.740 | 2.180 | 0.000 | 0.000 | 13.200 |
| ಪಾರ್-ತಾಪಿ-ನರ್ಮದಾ | 8180.730 | 1.630 | 32.500 | 0.000 | 0.000 |
| ದಮನ್ ಗಂಗಾ-ಪಿಂಜಾಲ್ | 1143.450 | 0.000 | 0.000 | 0.000 | 909.000 |
| ಬೇಡ್ತಿ-ವರದಾ | 622.500 | 0.600 | 4.000 | 61.000 | 0.000 |
| ಪಂಬಾ-ಆಚನಕೋವಿಲ್-ವೈಪ್ಪಾರ್ | 3626.050 | 0.910 | 508.000 | 0.000 | 0.000 |
| ನೇತ್ರಾವತಿ-ಹೇಮಾವತಿ | 394.250 | 0.340 | 0.000 | 6.000 | 0.000 |
| **ಮೊತ್ತ (ದ್ವೀಪಕಲ್ಪ ಪ್ರದೇಶ)** | **119306.320** | **45.900** | **850.500** | **1949.000** | **2198.200** |
| **ಮೊತ್ತ-ಹಿಮಾಲಯ ಪ್ರದೇಶ +ದ್ವೀಪಕಲ್ಪ ( ೧ ರ ಪರ್ಯಾಯ ೧೪ ನ್ನು ಹೊರತುಪಡಿಸಿ)** | **409088.800** | **163.082** | **30655.500** | **4193.000** | **11921.200** |
| **ಮೊತ್ತ-ಹಿಮಾಲಯ ಪ್ರದೇಶ ( ೧ ರ ಬದಲು ೧೪ ನ್ನು ಪರಿಗಣಿಸಿ )** | **396766.810** | **162.482** | **26483.500** | **5252.000** | **12136.200** |
| **ನಿವ್ವಳ ಹಚ್ಚುವರಿ ವಿದ್ಯುತ್ ಉತ್ಪಾದನೆ ( ೧ ರ ಪರ್ಯಾಯ ೧೪ ನ್ನು ಹೊರತುಪಡಿಸಿ)** | 26462.500 | | | | |
| **ನಿವ್ವಳ ಹಚ್ಚುವರಿ ವಿದ್ಯುತ್ ಉತ್ಪಾದನೆ ( ೧ ರ ಬದಲು ೧೪ ನ್ನು ಪರಿಗಣಿಸಿ )** | 21231.500 | | | | |

## ಸಾಧಕ-ಬಾಧಕಗಳು

ಮೇಲಿನ ಕೋಷ್ಟಕಗಳನ್ನು ನೋಡಿದರೆ ನದಿ ಜೋಡಣೆ ಅತ್ಯಂತ ಆಕರ್ಷಣೀಯ , ನಮ್ಮ ದೇಶದ ಎಲ್ಲ ನೀರಿನ ಸಮಸ್ಯೆಗಳನ್ನು ನೀಗಿಸುತ್ತದೆ ಎಂದು ಭಾಸವಾಗುತ್ತದೆ. ಆದರೆ ಇಂತಹ ದೊಡ್ಡ ಪ್ರಮಾಣದ ಯೋಜನೆಯ ಹಿಂದಿರುವ ಹಲವಾರು ಸಾಧಕ - ಬಾಧಕಗಳನ್ನು ನೋಡಬಹುದು

**ಕೋಷ್ಟಕ -೬ : ನದಿ ಜೋಡಣೆ/ತಿರುವು ಯೋಜನೆಯ ಪರ-ವಿರೋಧ ನಿಲುವುಗಳು.**

| ಬಾಧಕಗಳು-ವಿರೋಧ | ಸಾಧಕಗಳು -ಪರ |
|---|---|
| ನದಿ ತಿರುವು ಯೋಜನೆಯ ಸಮಗ್ರ ಅಧ್ಯಯನ ನಡೆದಿಲ್ಲ. ಇಂತಹ ಬೃಹತ್ ಯೋಜನೆಯಿಂದ ದಕ್ಕುವ ಲಾಭಗಳು ಅಸ್ಪಷ್ಟ. | ನದಿ ತಿರುವು ಒಂದು ಯೋಜನೆಯಲ್ಲ. ಅದು ಹಲವಾರು ಯೋಜನೆಗಳ ವ್ಯವಸ್ಥೆ. ಪರಿಣಿತರಿಂದ ನಡೆಸಿದ ಆಳ ಅಧ್ಯಯನಗಳಿಂದ ಈ ಯೋಜನೆ ದೀರ್ಘಕಾಲಘಟ್ಟದಲ್ಲಿ ದೇಶದ ಉದ್ದಗಲಕ್ಕೂ ಸಮಾಜೋ-ಆರ್ಥಿಕ ಲಾಭಗಳನ್ನು ತರಲಿದೆ. ಯೋಜನೆಯ ಸಮಗ್ರ ವರದಿಗಳು ಅಂತಿಮದಲ್ಲಿ ಯೋಜನಾ ಆಯೋಗದ ಮುಂದೆ ಪರಿಶೀಲಿಸಲ್ಪಡುತ್ತವೆ. ಈಗ ನಡೆಸಿರುವ ಒಟ್ಟಾರೆ ಅಧ್ಯಯನಗಳಿಂದ ಯೋಜನೆ ಆರ್ಥಿಕವಾಗಿ ಲಾಭದಾಯಕವೆಂದು ತಿಳಿದು ಬಂದಿದೆ. |
| ಈ ಯೋಜನೆಯನ್ನು ೧೦ ವರ್ಷಗಳ ಅವಧಿಯಲ್ಲಿ ಮುಗಿಸಲು ಸಾಧ್ಯವಿಲ್ಲ. | ಯಾವುದೇ ಯೋಜನೆಯನ್ನು ಪೂರ್ಣಗೊಳಿಸಲು ಸಮರ್ಪಕ ತಂತ್ರಜ್ಞಾನ , ಬಂಡವಾಳ ಹೂಡಿಕೆ , ಮಾನವ ಸಂಪನ್ಮೂಲ, ಕಾನೂನಿನ ಚೌಕಟ್ಟು ಅತ್ಯಗತ್ಯ. ಇಡೀ ಯೋಜನೆಯನ್ನು ೧೦ ವರ್ಷಗಳಲ್ಲಿ ಕಾರ್ಯಗೊತಗೊಳಿಸಲು ಸಾಧ್ಯವಿಲ್ಲ ಎನ್ನುವುದು ನಿಜ. ಆದರೆ ದೀರ್ಘ ಯೋಜನೆ ಸಿದ್ಧಪಡಿಸಿ ಹಂತಹಂತವಾಗಿ ಜಾರಿಗೊಳಿಸಬಹುದು |
| ಯೋಜನೆಯನ್ನು ಕುರಿತಾದ ಚರ್ಚೆಯಲ್ಲಿ ಜನರ ಪಾತ್ರವಿಲ್ಲದಂತಾಗಿದೆ. | ನದಿ ತಿರುವಿನ ಯೋಜನೆ ಕಳೆದ ೩-೪ ದಶಗಳಿಂದ ಸಾರ್ವಜನಿಕ ಚರ್ಚೆಯಲ್ಲಿದೆ. ಪ್ರಜಾಪ್ರಭುತ್ವದಲ್ಲಿ ಇಂತಹ ಯೋಜನೆಯ ಸಾಧಕ -ಬಾಧಕಗಳನ್ನು ಮುಚ್ಚಿಡಲು ಸಾಧ್ಯವಿಲ್ಲ. ಮಾಹಿತಿ ಹಕ್ಕು ಕಾಯ್ದೆಯ ಪ್ರಬಲ ಅಸ್ತ್ರದ ಮುಂದೆ ಈಗ ಏನನ್ನೂ ಮುಚ್ಚಿಡುವುದು ಸಾಧ್ಯವಿಲ್ಲ. ಜನರನ್ನು ಪ್ರತಿನಿಧಿಸುವ ದೇಶದ ಎಲ್ಲ ರಾಜಕೀಯ ಪಕ್ಷಗಳೂ ಈ ಯೋಜನೆಯ ಒಟ್ಟಾರೆ ಒಳಿತನ್ನು ಒಪ್ಪಿಕೊಂಡಿವೆ. |
| ಸಮಜೋ-ಆರ್ಥಿಕ-ಪಾರಿಸರಿಕ ಪರಿಣಾಮಗಳನ್ನು ಪರಿಗಣಿಸಿಲ್ಲ. ಸಣ್ಣದಾದ ಪರಿಸರ ಸ್ನೇಹಿ ಮತ್ತು ಸ್ಥಳೀಯವಾದ ಪರ್ಯಾಯ ಸಾಧ್ಯತೆಗಳ ಅಧ್ಯಯನ ನಡೆಸಿಲ್ಲ | ಮಳೆನೀರಿನ ಸಂಗ್ರಹ , ಸ್ಥಳೀಯವಾದ ಕೆರೆ ಕಟ್ಟೆಗಳ ಪುನರುಜ್ಜೀವನ , ನೀರಿನ ಬಳಕೆ ಕುರಿತಾದ ಜನಜಾಗೃತಿ ಒಂದು ಹಂತದವರೆಗೆ ಸರಿ. ಭಾರತದಂತಹ ಜನಸಂಖ್ಯೆಯ , ಅಭಿವೃದ್ಧಿಶೀಲ ದೇಶಕ್ಕೆ ಪರ್ಯಾಯ ಮಾರ್ಗಗಳು ದೊಡ್ಡಮಟ್ಟದಲ್ಲಿ ಪರಿಹಾರ ಒದಗಿಸಲಾರವು ಮತ್ತು ಅವುಗಳ ವೆಚ್ಚವೂ ಅಧಿಕ |
| ಪುನರ್ವಸತಿ ಸಮಸ್ಯೆ ರಾಕ್ಷಸಾಕಾರ ತಳೆಯಲಿದೆ. ಸ್ವಾತಂತ್ರ್ಯಾನಂತರದ ಯಾವ ಬಹತ್ ಯೋಜನೆಗಳಲ್ಲೂ ಸಮರ್ಪಕ ಪುನರ್ವಸತಿ ನಡೆದಿಲ್ಲ. | ಸಂತ್ರಸ್ತ ಜನರನ್ನು ವಿಶ್ವಾಸಕ್ಕೆ ಪಡೆಯುವಂತೆ ಕಾನೂನಿಗೆ ತಿದ್ದುಪಡಿ ತಂದು ಸಮರ್ಪಕ ಪರಿಹಾರ ದಕ್ಕುವಂತೆ ಮಾಡುವುದರಿಂದ ಈ ಸಮಸ್ಯೆಯನ್ನು ಬಗೆಹರಿಸಬಹುದು. ಮಹಾನಗರಗಳಲ್ಲಿ ವಸತಿಗಾಗಿ ಭೂಮಿಯನ್ನು ಕಳೆದುಕೊಂಡವರಿಗೆ ಅಭಿವೃದ್ಧಿ ಪಡಿಸಿದ ಸ್ಥಳದ ಪಾಲುದಾರರನ್ನಾಗಿ ಪರಿಗಣಿಸುವಂತಹ ಕಾನೂನುಗಳು ಹಾಗೂ ಮಾನವೀಯತೆ ದೃಷ್ಟಿ ಮೇಳೈಸುವಂತೆ ನೋಡಿಕೊಳ್ಳವಂತೆ ಮಾಡುವುದು ಸಾಧ್ಯ. .|
| ಸಣ್ಣದು ಸುಂದರ. ಬೃಹತ್ತಾದದ್ದು ಜನರಿಂದ ದೂರ ಮತ್ತು ಪಟ್ಟಭದ್ರ ಹಿತಾಸಕ್ತಿಗಳಿಗೆ ಪ್ರಿಯವಾದುದು. | ಸಣ್ಣದು ಯಾವಾಗಲೂ ಸುಂದರ ಮತ್ತು ಸರಿ ಎಂದು ಹೇಳಲಾಗದು. ಕೆಲವು ಅಡ್ಡಪರಿಣಾಮಗಳ ಹೊರತಾಗಿಯೂ ಈಗ ಅಸ್ತಿತ್ವದಲ್ಲಿರುವ ಬೃಹತ್ ಆಣೆಕಟ್ಟುಗಳಿಲ್ಲದ ನಮ್ಮ ಜೀವನವನ್ನು ಊಹಿಸಿಕೊಳ್ಳಲೂ ಸಾಧ್ಯವಿಲ್ಲ. ಕೃಷ್ಣರಾಜ ಸಾಗರ, ತುಂಗಭದ್ರಾ , ಆಲಮಟ್ಟಿ ಜಲಾಶಯಗಳಿಲ್ಲದ ಬದುಕು ಅನೂಹ್ಯ. ಈವರೆಗಿನ ಎಲ್ಲ ನೀರಾವರಿ ಯೋಜನೆಗಳು ಜನಸಾಮಾನ್ಯರಾದ ರೈತರನ್ನು ತಲುಪಿರುವುದನ್ನು ಮರೆಯಬಾರದು. |
| ಬೃಹತ್ ಯೋಜನೆಗಳನ್ನು ಸರ್ಕಾರ ಒಂದರ ನೆರವಿನಿಂದಲೇ ಕಾರ್ಯಗೊತಗೊಳಿಸಲು ಸಾಧ್ಯವಿಲ್ಲ. ಅದಕ್ಕಾಗಿ ಖಾಸಗಿ ಬಂಡವಾಳಕ್ಕೆ ಮೊರೆಹೋಗಬೇಕಾಗುತ್ತದೆ. ಇದರ ಮೂಲಕ ಬಹುರಾಷ್ಟ್ರೀಯ ಕಂಪೆನಿಗಳು ಪ್ರವೇಶಿಸುತ್ತವೆ. ಅವುಗಳು ವಿಧಿಸುವ ದರ ಜನಸಾಮಾನ್ಯರಿಗೆ ಎಟುಕದಂತಾಗುತ್ತದೆ. | ಈ ವಿಷಯ ಕುರಿತಾದಂತೆ ಸಾರ್ವಜನಿಕ ವಲಯದಲ್ಲಿ ಚರ್ಚೆಗಳು ನಡೆಯುತ್ತಲೇ ಇವೆ. ಮಾಹಿತಿ ತಂತ್ರಜ್ಞಾನ ಜಾಗತೀಕರಣಕ್ಕೊಳಪಡಬಹುದಾದರೆ , ಆ ವಲಯದ ಕಂಪೆನಿಗಳ ವಾರ್ಷಿಕ ವಹಿವಾಟು ಹಲವಾರು ಸಣ್ಣರಾಜ್ಯಗಳ ಬಜೆಟ್‌ಗಿಂತ ಅಧಿಕವಾಗಿರುವುದನ್ನು ಒಪ್ಪಬಹುದಾದರೆ ನೀರಿನ ವಿಚಾರದಲ್ಲಿ ಮಡಿವಂತಿಕೆ ಏಕೆ ? ಗುಣಮಟ್ಟದ ಸೇವೆಗೆ ತಕ್ಕುದಾದಂತಹ ಬೆಲೆ ನಿಡುವುದರಲ್ಲಿ ತಪ್ಪೇನಿದೆ ? |

| | |
|---|---|
| ನದಿ ತಿರುವಿನಂತಹ ಬೃಹತ್ ಯೋಜನೆಗಳು ಭ್ರಷ್ಟಾಚಾರದ ಗಂಗೋತ್ರಿಗಳು. ಗುತ್ತಿಗೆದಾರ-ಪುಢಾರಿ-ವ್ಯಾಪಾರಿ-ಇಂಜಿನಿಯರ್ ಗಳೆಂಬ ಧನ ಪಿಪಾಸುಗಳ ಕಣ್ಮಣಿಗಳು.<br><br>ನದಿ ತಿರುವು ಯೋಜನೆಯಿಂದ ಪರಿಸರಕ್ಕೆ ಧಕ್ಕೆಯಾಗಲಿದೆ. ನೀರಿನ ಮುಖಾಂತರ ಸ್ಥಳವೊಂದಕ್ಕೆ ಪರಕೀಯವೆನಿಸುವ ಕೀಟ, ಸಸ್ಯಗಳು ವರ್ಗಾಂತರವಾಗಲಿವೆ. ನೆಲ ಸಾರ ಕಳೆದುಕೊಂಡು ಸವುಳಾಗಲಿದೆ. | ಇವು ಕಪೋಲ ಕಲ್ಪಿತ ಸಂಗತಿಗಳು. ಸಣ್ಣ ಮಟ್ಟದ , ವ್ಯಾಪಕವಾದ ಪಡಿತರ ಹಂಚಿಕೆಯಂತಹ ಕಾರ್ಯಕ್ರಮಗಳು ಸಹ ಭ್ರಷ್ಟಾಚಾರದಿಂದ ಮುಕ್ತವಿಲ್ಲ. ಭ್ರಷ್ಟಾಚಾರಕ್ಕೆ ಹೆದರಿದ್ದೇ ಆದರೆ ನಾವು ಯಾವುದೇ ಯೋಜನೆಯನ್ನು ಕೈಗೆತ್ತಿಕೊಳ್ಳುವಂತಿಲ್ಲ. ಇಂತಹುದಕ್ಕೆ ಹೆದರಿದ್ದರೆ ಈ ದಶಕದಲ್ಲಿ ನಿರ್ಮಾಣಗೊಂಡಿರುವ ಯಾವ ಉನ್ನತಮಟ್ಟದ ರಸ್ತೆಗಳು ಅಸ್ತಿತ್ವದಲ್ಲಿರುತ್ತಿರಲಿಲ್ಲ. ಸಮಾಜ ಮತ್ತು ಕಾನೂನು ಭ್ರಷ್ಟತೆಯನ್ನು ಹತ್ತಿಕ್ಕುವಂತಹ ಶಕ್ತಿಯನ್ನು ಬೆಳೆಸಿಕೊಳ್ಳಬೇಕು. ಈಗಾಗಲೇ ಭಾರತದಲ್ಲಿ ಹಲವಾರು ನದಿ ತಿರುವು ಯೋಜನೆಗಳು ಕಾರ್ಯಗತಗೊಂಡಿವೆ. ಭಾರತದಲ್ಲಿ ೧೦೦ ವರ್ಗಳಿಂದಲೂ ಚಾಲ್ತಿಯಲ್ಲಿರುವ ಕೆಲವು ನದಿ ತಿರುವು ಯೋಜನೆಗಳಿವೆ. ಎಲ್ಲಿಯೂ ಇಂತಹ ಸಮಸ್ಯೆ ಕಂಡುಬಂದಿಲ್ಲ. ಈಗ ಪ್ರಸ್ತಾಪಿಸಲ್ಪಟ್ಟ ನದಿ ತಿರುವು ಯೋಜನೆಯನ್ನು ಸಂಪೂರ್ಣ ಕಾರ್ಯಗತಗೊಳಿಸಿದಾಗ ೬% ನೀರು ಮಾತ್ರ ಸಾಗಾಣಿಕಯಾಗಿರುತ್ತದೆ. ಅಗತ್ಯಕ್ಕಿಂತ ಹೆಚ್ಚಾಗಿ ನೀರನ್ನು ಬಳಸುವುದರಿಂದ ಭೂಮಿ ಸವುಳಾಗುತ್ತದೆ. ಹೆಚ್ಚಿನ ಸಮಸ್ಯೆಗಳು ನೀರಿನ ಬಳಕೆಯ ತಿಳುವಳಿಕೆಯ ಕೊರತೆಯಿಂದಾಗಿ ಬರುತ್ತವೆ. ಜನರಲ್ಲಿ ಎಚ್ಚರ ಮೂಡಿಸುವುದರ ಮೂಲಕ , ಯೋಜನೆಯ ಸಮಯದಲ್ಲಿ ತೆಗದುಕೊಳ್ಳುವ ಕ್ರಮಗಳಿಂದ ತಪ್ಪಿಸಬಹುದು. |
| ಸಾಂಪ್ರದಾಯಿಕವಾದ ಈಗ ಪ್ರಚಲಿತವಿರುವ ನೀರಾವರಿ ಪದ್ಧತಿ ಸರಿಯಿಲ್ಲ. ಇಂತಹ ಪದ್ಧತಿಯನ್ನು ದೊಡ್ಡ ಮಟ್ಟದಲ್ಲಿ ಅಳವಡಿಸಿಕೊಳ್ಳುವುದರಿಂದ ನೆರೆ ಹೆಚ್ಚಿ , ಅರಣ್ಯನಾಶಕ್ಕೆ ನಾಂದಿಯಾಗುತ್ತದೆ. | ಆಧಾರರಹಿತ ಕಲ್ಪನೆಗಳಲ್ಲಿ ಇದು ಸಹ ಒಂದು. ಈವರೆಗೆ ಎಲ್ಲ ನೀರಾವರಿ ಯೋಜನೆಗಳು ಜನರಲ್ಲಿ ನೆಮ್ಮದಿಯನ್ನು ತಂದು ಜೀವನೋಪಾಯಕ್ಕಾಗಿ ವಲಸೆ ಹೋಗುವುದನ್ನು ತಪ್ಪಿಸಿವೆ. ನೆರೆ ನಿಯಂತ್ರಿಸಿ ಅಲ್ಪಮಟ್ಟದಲ್ಲಿ ಕೆಲವು ಕಡೆ ಸ್ಥಳೀಯವಾಗಿ ಕಾಡು ಬೆಳೆಯಲು ಸಹಕಾರಿಯಾಗಿವೆ. |
| ನದಿ ತಿರುವು ಯೋಜನೆಗಳಿಂದ ರಾಜ್ಯ ರಾಜ್ಯಗಳ ನಡುವೆ ಹಂಚಿಕೆ ವಿವಾದಗಳು ಭುಗಿಲೆದ್ದು ದೇಶ ಒಡೆದು ಹೋಗುವ ಸಾಧ್ಯತೆಗಳಿವೆ.ನೆರೆ ಹೊರೆಯ ದೇಶಗಳೊಂದಿಗೆ ಸಂಬಂಧ ಹದಗೆಡಲಿದೆ. | ನದಿ ನೀರಿನ ಹಂಚಿಕೆ ಕುರಿತಾಗಿ ಕೆಲವು ರಾಜ್ಯಗಳ ನಡುವೆ ಕೆಲವೊಮ್ಮೆ ಕಹಿ ವಾತಾವರಣ ಮೂಡುವುದು ನಿಜ. ಇದು ಶಾಶ್ವತ ವೈರತ್ವ ಮತ್ತು ದೇಶ ಒಡೆಯುವಷ್ಟು ದೂರ ಹೋಗಲಾರದು. ಐತಿಹಾಸಿಕ ದಾಖಲೆಗಳಿಂದ ಕಾವೇರಿ ನದಿ ಕುರಿತಾಗಿ ಕನ್ನಡಿಗ ತಮಿಳರ ನಡುವೆ ಸಾವಿರ ವರ್ಷಕ್ಕಿಂತಲೂ ಹೆಚ್ಚಿನ ವಿವಾದವಿದೆ. ಆದರೆ ಎರಡು ರಾಜ್ಯಗಳ ನಡುವಿನ ಸಂಬ ದೀರ್ಘಾವಧಿಯಿಂದ ಒಂದೇ ಬಗೆಯದಾಗಿದ್ದು ಎಂದಿಗೂ ಅತಿರೇಕಕ್ಕೆ ಹೋಗಿಲ್ಲ. ಕಾಲಾನುಕ್ರದಲ್ಲಿ ರಾಜ್ಯಗಳು ನೆರಹೊರೆಯವರ ನೀರಿನ ಅಗತ್ಯತೆಗಳನ್ನು ಹೆಚ್ಚು ಮಾಗಿದ ರೀತಿಯಲ್ಲಿ ನೋಡತೊಡಗುತ್ತವೆ. ಪಾಲುದಾರ ರಾಜ್ಯಗಳ ನಡುವೆ ಒಮ್ಮತದಿಂದ ಯೋಜನಗಳನ್ನು ಕಾರ್ಯಗತಗೊಳಿಸಬಹುದು. |
| ಜನದಟ್ಟತೆಯಿರುವ ಕೆಲವು ರಾಜ್ಯಗಳಿಗೆ ನದಿ ತಿರುವು ಯೋಜನೆಗಳಿಂದ ಹೆಚ್ಚಿನ ಲಾಭಗಳಿಲ್ಲ. ಕೆಲವು ರಾಜ್ಯಗಳು ಪಡೆದುಕೊಳ್ಳುವುದಕ್ಕಿಂತ ಕಳೆದುಕೊಳ್ಳುವುದು ಹೆಚ್ಚು. | ಒಂದು ಜನ ಸಮುದಾಯ ತನ್ನನ್ನು ತಾನು ಒಂದು ದೇಶದ ಅಂಗವೆಂದು ಗುರುತಿಸಿಕೊಂಡ ಮೇಲೆ ಅದು ಆ ದೇಶದ ಒಟ್ಟಾರೆ ಹಿತದೃಷ್ಟಿಗೆ ಹಿತವಾಗುವುದನ್ನು ಪರಿಗಣಿಸ ಬೇಕಾಗುತ್ತದೆ. ಸರ್ಕಾರವೊಂದು ನಿಯೋಜಿಸುವ ಎಲ್ಲ ಕಲ್ಯಾಣ ಕಾರ್ಯಕ್ರಮಗಳು ದೇಶದ ಅತಿ ಹೆಚ್ಚಿನ ಜನರಿಗೆ ಅತಿ ಹೆಚ್ಚು ಸೌಲಭ್ಯ ಕಲ್ಪಿಸುವತ್ತ ಸಾಗುತ್ತವೆ. ನೀರನ್ನು ಕಳೆದುಕೊಳ್ಳುವ ರಾಜ್ಯ ಬೇರೆ ಕಾರ್ಯಕ್ರಮಗಳಲ್ಲಿ ಹೆಚ್ಚಿನ ಲಾಭ ಪಡೆಯುವುದು ಸಹ ಸಾಧ್ಯ. |
| ನದಿಕೊಳ್ಳವೊಂದರೊಳಗಿನ ಎಲ್ಲ ಅಗತ್ಯತೆಗಳನ್ನು ಪೂರೈಸುವವರೆಗೆ ಅದರ ಕೊಳ್ಳದ ಹೊರಗೆ ನೀರನ್ನು ಒಯ್ಯುವ ಯೋಜನೆಗಳನ್ನು ಕೈಗೆತ್ತಿಕೊಳ್ಳಬಾರದು. | ರಾಷ್ಟ್ರೀಯ ಜಲಾಭಿವೃದ್ಧಿ ಏಜೆನ್ಸಿ ಎಲ್ಲ ನದಿಕೊಳ್ಳಗಳ ಈಗಿನ ಹಾಗೂ ಮುಂದಿನ ನೀರಿನ ಅಗತ್ಯತೆಗಳನ್ನು ಪರಿಗಣಿಸಿದ ನಂತರವೇ ಹೆಚ್ಚುವರಿ ಲಭ್ಯ ನೀರು ಮತ್ತು ನದಿ ತಿರುವು ಯೋಜನೆಗಳನ್ನು ಸೂಚಿಸಿದೆ. |
| ನದಿ ತಿರುವಿನ ಯೋಜನೆಗಳು ಬಹು ವೆಚ್ಚದಾಯಕ | ನದಿ ಕೊಳ್ಳವೊಂದರ ಪ್ರದೇಶದಲ್ಲಿ ನೀರಿನ ಕೊರತೆಯಿದ್ದರೆ ಬೇರೆ ಕಡೆಯಿಂದ ಅದನ್ನು ಸಾಗಿಸಲೇಬೇಕಾದ ಅನಿವಾರ್ಯತೆ ಎದುರಾಗುತ್ತದೆ. ಇದು ನೀರಿಗೆ ಮಾತ್ರವಲ್ಲ ಎಲ್ಲ ವಸ್ತುಗಳ ವಿಷಯದಲ್ಲೂ ನಿಜ. |
| ನದಿ ತಿರುವು ಯೋಜನೆಗಳಿಂದ ಮಾಲಿನ್ಯಗೊಂಡ ನೀರು ವ್ಯಾಪಕವಾಗಿ ವಿವಿಧ ಪ್ರದೇಶಗಳಿಗೆ ತಲುಪುತ್ತದೆ. | ಮಾಲಿನ್ಯಗೊಂಡ ನೀರನ್ನು ಸಾಗಿಸುವ ಯಾವ ಯೋಜನೆಗಳನ್ನು ಕೈಗೆತ್ತಿಕೊಳ್ಳದಿರುವುದು. |
| ನದಿ ತಿರುವು ಯೋಜನೆಗಳಿಂದ ಸಂತ್ರಸ್ತ್ರರ ಪುನರ್ವಸತಿ , ನೆಲೆ ನಷ್ಟ , ಸಸ್ಯ ಸಂಪತ್ತಿನ ನಾಶದಂತಹ ಪೀಡೆಗಳು ಎದುರಾಗುತ್ತವೆ. | ಇವುಗಳನ್ನು ಪರಿಹರಿಸಲು ಸರಿಯಾದ ಯೋಜನಾ ನೀತಿಗಳನ್ನು ರೂಪಿಸಬೇಕು. ಯಾವುದೇ ಅಭಿವೃದ್ಧಿ ಯೋಜನೆಯ ಹಿಂದೆ ಈ ಸಮಸ್ಯೆಗಳು ಅಡಗಿರುತ್ತವೆ. ಭಾರತದಲ್ಲಿ ಈವರೆಗೆ ಕಟ್ಟಲಾಗಿರುವ ೪೦೦೦ ಕ್ಕಿಂತಲೂ ಅಧಿಕ ಆಣೆಕಟ್ಟುಗಳಿಂದ ಇಂತಹ ಸಮಸ್ಯೆಗಳ ಸ್ವರೂಪ ಮತ್ತು ಎದುರಿಸುವ ವಿಧಾನಗಳು ತಿಳಿದಿದ್ದು ಇದರಲ್ಲಿ ಸಾಕಷ್ಟು ಅನುಭವವನ್ನೂ ನಾವು ಗಳಿಸಿದ್ದೇವೆ. |

| | |
|---|---|
| ರಾಷ್ಟೀಯ ಆಯೋಗ ಪ್ರತಿಪಾದಿಸಿರುವ ನದಿ ತಿರುವು ಯೋಜನೆಗಳು ರಾಷ್ಟ್ರೀಯ ಜಲಾಭಿವೃದ್ಧಿ ಏಜೆನ್ಸಿಗಿಂತಲೂ ಸೂಚಿಸಿದವಕ್ಕಿಂತಲೂ ಸಣ್ಣ ಪ್ರಮಾಣದಲ್ಲಿವೆ. ಹೀಗಿರುವಾಗ ಬೃಹತ್ ಪ್ರಮಾಣದಲ್ಲಿ ನೀರನ್ನು ಸಾಗಿಸುವುದೇಕೆ? | ಈ ಎರಡೂ ಸಂಸ್ಥೆಗಳು ನೀರಿನ ಬರ ನೀಗಿಸಲು ನದಿ ತಿರುವು ಯೋಜನೆಗಳನ್ನು ಒಪ್ಪಿಕೊಳ್ಳುತ್ತವೆ. ರಾಷ್ಟ್ರೀಯ ಆಯೋಗ (ರಾ.ಆ) ಹಾಗೂ ರಾಷ್ಟ್ರೀಯ ಜಲಾಭಿವೃದ್ಧಿ ಏಜೆನ್ಸಿಯ (ರಾ.ಜ.ಏ) ನಡುವಿರುವ ವ್ಯತ್ಯಾಸಗಳು ಮುಂದಿನಂತಿವೆ. (೧) ನದಿಗಳ ನೀರಿನ ಲಭ್ಯತೆಯ ಅವಲಂಬನೆ : ರಾ.ಆ=೫೦ % , ರಾ.ಜ.ಏ=೭೫ % (೨) ನೀರಿನ ಆಕರಗಳು : ರಾ.ಆ=ಮೇಲ್ಮೈ ನೀರು + ಅಂತರ್ಜಲ , ರಾ.ಜ.ಏ=ಮೇಲ್ಮೈ ನೀರು, ಅಂತರ್ಜಲ ಸಾಗಿಸಲು ಅಲಭ್ಯ. ಸ್ಥಳೀಯ ಬಳಕೆಗೆ ಸಾಧ್ಯ.(೩) ನೀರಿನ ಉತ್ಪಾದನೆ ಮತ್ತು ಬಳಕೆಯ ದಕ್ಷತೆಯ ನಿರ್ಧಾರದಲ್ಲಿ ವ್ಯತ್ಯಾಸ. ರಾಷ್ಟ್ರೀಯ ಆಯೋಗದ ವರದಿಯನ್ನು ಕೇಂದ್ರ ಸರ್ಕಾರ ಹಲವಾರು ಕಾರಣಗಳಿಂದಾಗಿ ಒಪ್ಪಿಕೊಂಡಿಲ್ಲ. |

## ಕರ್ನಾಟಕದಲ್ಲಿ

ರಾಷ್ತೀಯ ನದಿ ಸಂಪರ್ಕ ಯೋಜನೆಯಲ್ಲಿ (೧) ಕೃಷ್ಣಾ (ಆಲಮಟ್ಟಿ)-ಪೆನ್ನಾರ್ (೨) ಬೇಡ್ತಿ- ವರದಾ ಸಂಪರ್ಕ (ಸಂಪರ್ಕ-14) (೩) ನೇತ್ರಾವತಿ-ಹೇಮಾವತಿ ಬರುತ್ತವೆ. ಇವುಗಳಲ್ಲಿ ನೇತ್ರಾವತಿ-ಹೇಮಾವತಿ ಯೋಜನೆಯನ್ನು ಕಾರ್ಯಗತಗೊಳಿಸಲು ಕರ್ನಾಟಕದ ಸರ್ಕಾರದ ಮೇಲೆ ಪಕ್ಷಾತೀತವಾದ ಒತ್ತಡವಿದೆ. ಈ ಯೋಜನೆ ಸಂಪೂರ್ಣ ಕರ್ನಾಟಕದಲ್ಲಿ ಬರುವುದರಿಂದ ಅಂತಾರಾಜ್ಯ ವಿವಾದಕ್ಕಿಂತಲೂ ಪರಿಸರ ಸಂಬಂಧಿ ಅಂಶಗಳೇ ಅಡಚಣೆಗಳಾಗಿವೆ. ಇದರ ಹೊರತು ಇನ್ನೆರಡು ನದಿ ತಿರುವು ಯೋಜನೆಗಳ ಸ್ಥೂಲ ನೋಟ ಮುಂದಿದೆ.

**ಬೇಡ್ತಿ- ವರದಾ ಸಂಪರ್ಕ :**ಈ ಯೋಜನೆಯಲ್ಲಿ ೦,೨ ಬಿ,ಸಿ.ಎಂ ಹೆಚ್ಚುವರಿ ನೀರನ್ನು ಬೇಡ್ತಿ ನದಿಪಾತ್ರದಿಂದ ನೀರಿನ ಕೊರತೆಯ ಕೃಷ್ಣಾ ಕೊಳ್ಳದ ಉಪನದಿಯಾದ ತುಂಗಭದ್ರಾಕ್ಕೆ ವರ್ಗಾಯಿಸಲಾಗುತ್ತದೆ. ಇದರಿಂದ 60200 ಹೆಕ್ಟೇರ್ ನೀರಾವರಿ ಸಾಧ್ಯ ಇದಕ್ಕಾಗಿ ಬೇಡ್ತಿ ನದಿಪಾತ್ರದಲ್ಲಿ ಒಟ್ಟು ೦.೦೯೮ ಬಿ.ಸಿ.ಎಂ– ಬಳಕೆ ೦.೦೮೫೫ ಬಿ.ಸಿ.ಎಂ ಸಂಯೋಜನ ಸಾಮರ್ಥ್ಯ ಹೊಂದಿದ ಎರಡು ಜಲಾಶಯಗಳನ್ನು ನಿರ್ಮಿಸಬೇಕು. ಇವುಗಳಲ್ಲಿ ಒಂದು ಜಲಾಶಯವನ್ನು ವರದಾ ನದಿಗೆ ಕಾಲುವೆಯ ಮೂಲಕ ನೇರವಾಗಿ ಸಂಪರ್ಕಿಸಲಾಗುವುದು. ಈ ಸಂಪರ್ಕ ಜಾಲ ಕುರಿತಾಗಿ ಈಗಾಗಲೇ ಪರಿಸರ ಅಧ್ಯಯನಗಳು ಸಾಗಿವೆ. ಬೇಡ್ತಿ–ವರದಾ ನದಿ ಪಾತ್ರಗಳು ‘ಅಂತಾರಾಷ್ಟ್ರೀಯ ನಿಸರ್ಗ ಸಂರಕ್ಷಣಾ ಒಕ್ಕೂಟ’ದಿಂದ (International Union for Conservation of Nature - IUCN) ಜೀವ ವೈವಿಧ್ಯದ ಸಕ್ರಿಯ ಪ್ರದೇಶಗಳೆಂದು ಘೋಷಿಸಲ್ಪಟ್ಟಿವೆ.ಈ ಪ್ರದೇಶದಲ್ಲಿ 1741 ಬಗೆಯ ಹೂ ಬಿಡುವ ಸಸ್ಯಗಳು, 420 ಪ್ರಭೇದದ ಪಕ್ಷಿಗಳು ಹಾಗು ಇತರ ವನ್ಯಜೀವಿಗಳ ನೆಲೆಯೆಂದು ಗುರುತಿಸಲ್ಪಟ್ಟಿದೆ. ಈ ಜೀವ ವೈವಿಧ್ಯ ಇಡೀ ಕೇರಳ ರಾಜ್ಯದ ಜೀವ ವೈವಿಧ್ಯಕ್ಕಿಂತಲೂ ಮಿಗಿಲಾದುದೆಂದು ಗುರುತಿಸಲಾಗಿದೆ. ಈ ಯೋಜನೆಯಲ್ಲಿ ನೀರನ್ನು ಎತ್ತಲು 61 MW ವಿದ್ಯುಚ್ಛಕ್ತಿ ಬೇಕಾದರೆ, 3.6 MW ವಿದ್ಯುತ್ ಉತ್ಪಾದಿಸುವ ಸಾಧ್ಯತೆಗಳಿವೆ.

**ಕೃಷ್ಣಾ (ಆಲಮಟ್ಟಿ ) –ಪೆನ್ನಾರ್ ಸಂಪರ್ಕ :**ಆಲಮಟ್ಟಿ ಜಲಾಶಯದ ಹಿಂದೆ ಕೃಷ್ಣಾ ಕೊಳ್ಳದ ಪ್ರದೇಶ 3375 ಚ ಕಿ. ಮೀ ಗಳಷ್ಟಿದೆ. ಈ ಜಲಾನಯನ ಪ್ರದೇಶದಿಂದ ಆಲಮಟ್ಟಿಯವರೆಗೆ ಬರುವ ನೀರನ್ನು ಪೆನ್ನಾರ್ ನತ್ತ ತಿರುಗಿಸುವುದು ಈ ಯೋಜನೆಯ ಉದ್ದೇಶ.. ಗೋದಾವರಿ ನೀರನ್ನು ಕೃಷ್ಣಾದತ್ತ ತಿರುಗಿಸಿದಂತೆ ಕೃಷ್ಣಾದಿಂದ ಕೆಲಪ್ರಮಾಣದ ನೀರನ್ನು ಪೆನ್ನಾರ್-ನತ್ತ ತಿರುಗಿಸುವುದು ಈ ಯೋಜನೆಯ ಉದ್ದೇಶ.. ಗೋದಾವರಿಯಿಂದ ಕೃಷ್ಣಾಗೆ ತಿರುಗಿಸಲಾಗುವ ಎಲ್ಲಾ ನೀರು ಕರ್ನಾಟಕಕ್ಕಿಂತಲೂ ಕೆಳಭಾಗದ ಪ್ರದೇಶಗಳಿಗೆ ಸಾಗುತ್ತದೆ. ಹಾಗಾಗಿ ಕರ್ನಾಟಕಕ್ಕೆ ಲಾಭವಾಗುವಂತೆ ಕೃಷ್ಣಾ ನದಿಗೆ ಮೇಲ್ಭಾಗದಲ್ಲಿ ಬೇಡ್ತಿ ವರದಾ ನದಿಯ ಮೂಲಕ ಮಾತ್ರ ಹೆಚ್ಚುವರಿ ನೀರನ್ನು ತರಲು ಸಾಧ್ಯ. ಈ ಯೋಜನೆಯಲ್ಲಿ 1.980 ಬಿ.ಸಿ.ಎಂ ನೀರನ್ನು 587 ಕಿ, ಮೀ ಉದ್ದದ ಕಾಲುವೆಯ ಮೂಲಕ ಪೆನ್ನಾರ್ ಉಪನದಿಯತ್ತ ಸಾಗಿಸಲಾಗುವುದು. ಹೀಗೆ ಸಾಗಿಸಿದ ೦.೦೮೩ ಬಿ.ಸಿ.ಎಂ ನೀರಿನಲ್ಲಿ ಒಟ್ಟು -೦.೦೭೩ ಬಿ.ಸಿ.ಎಂ ಬಳಕೆಯ ನೀರನ್ನು ಪೆನ್ನಾರ್ ನದಿ ಪಾತ್ರದ ಕಾಲ್ವಪಳ್ಳಿಯ ಬಳಿ ಜಲಾಶಯ ನಿರ್ಮಿಸಿ ಸಂಗ್ರಹಿಸಲಾಗುವುದು. ಅಲ್ಲಿ ಪೆನ್ನಾರ್ ನದಿ 5616 ಚ ಮೀ ಜಲಾನಯನ ಪ್ರದೇಶ ಹೊಂದಿರುತ್ತದೆ.

ಆದ್ದರಿಂದ ಮೇಲಿನ ಎರಡು ಸಂಪರ್ಕಗಳಲ್ಲಿ ಬೇಡ್ತಿ-ವರದಾ ನದಿ ಸಂಪರ್ಕದ ಮೂಲಕ ಕರ್ನಾಟಕಕ್ಕೆ ಹೆಚ್ಚಿನ ನೀರು ಸಿಗುವುದಾದರೂ ಪರಿಸರದ ಕಾರಣದಿಂದ ಅದು ಕಾರ್ಯಗತಗೊಳ್ಳುವುದು ಕಷ್ಟ . ಕೃಷ್ಣಾ (ಆಲಮಟ್ಟಿ ) –ಪೆನ್ನಾರ್ ಸಂಪರ್ಕದಿಂದ ಕರ್ನಾಟಕದ ಭಾಗಗಳಿಗೆ ನೀರು ದಕ್ಕುವುದಿಲ್ಲ.

## ಮುಂದೇನು ?

ನದಿ ಸಂಪರ್ಕ/ತಿರುವು ಯೋಜನೆಗಳನ್ನು ಕೈಗೆತ್ತಿಕೊಳ್ಳುವಂತೆ ಸರ್ಕಾರಕ್ಕೆ ಸೂಚಿಸುವಂತೆ ೨೦೦೨ ರಲ್ಲಿ ಸರ್ವೋಚ್ಚ ನ್ಯಾಯಾಲಯದಲ್ಲಿ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಸಲಾಯಿತು. ಸರ್ವೋಚ್ಚ ನ್ಯಾಯಾಲಯದ ಆದೇಶದ ಮೇರೆಗೆ ಡಿಸೆಂಬರ್ 2002 ರಂದು ಎನ್.ಡಿ.ಎ ಸರ್ಕಾರ ‘‘ಟಾಸ್ಕ ಫೋರ್ಸ್’’ ರಚಿಸಿ ನದಿ ಪಾತ್ರಗಳ ಜೋಡಣೆಯ ಕ್ರಿಯಾ ಯೋಜನೆಯನ್ನು ಸಿದ್ಧಗೊಳಿಸಿ , ಅದಕ್ಕೆ ಬೇಕಾದ ವೆಚ್ಚ , ಬಂಡವಾಳ ಹೊದಿಕೆಯ ಮೂಲಗಳನ್ನು ಗುರುತಿಸಿ 2016 ರ ವೇಳೆಗೆ ಯೋಜನೆಯನ್ನು ಕೈಗೆತ್ತಿಕೊಳ್ಳುವಂತೆ ಮಾಡಲು ಬೇಕಾದ ವೇಳಾಪಟ್ಟಿಯನ್ನು ಸಿದ್ದ ಪಡಿಸಬೇಕೆಂದು ಗೊತ್ತು ಪಡಿಸಲಾಯಿತು. ಆಳುವ ಪಕ್ಷಕ್ಕೆ ನದಿ ಜೋಡಣೆಯಂತಹ ಜನಪ್ರಿಯ ಯೋಜನೆಗಳು ಸದಾ ಆಕರ್ಷಕ. ಆದ್ದರಿಂದ ಅದನ್ನು ಯುದ್ದೋಪಾದಿಯಲ್ಲಿ ಕೈಗೆತ್ತಿಕೊಳ್ಳುವುದಾಗಿ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಘೋಷಿಸಿದರು. ವಿರೋಧ ಪಕ್ಷಗಳು ಇಂತಹ ಸನ್ನಿವೇಶದಲ್ಲಿ ಯೋಜನೆಯ ವಿಷಯದಲ್ಲಿ ಅಪಸ್ವರವೆತ್ತಿ ಜನರ ದೃಷ್ಟಿಯಲ್ಲಿ ಖಳನಾಯಕರಾಗಲು ಇಚ್ಛಿಸುವುದಿಲ್ಲ. ಇದು ರಾಜಕೀಯ ನಡಾವಳಿ. ಆದ್ದರಿಂದ ಯಾವ ಚರ್ಚೆಯು ಇಲ್ಲದೇ ವಿರೋಧ ಪಕ್ಷದ ನಾಯಕರು ಇದನ್ನು ತುಂಬು ಹೃದಯದಿಂದ ಸ್ವಾಗತಿಸಿದರು. ಇದಾದ ನಂತರ ಭಾರತದ ಎಲ್ಲ್ ನದಿಗಳಲ್ಲಿ ಸಾಕಷ್ಟು ನೀರು ಹರಿದಿದೆ. ರಾಜಕೀಯ ಸ್ಥಿತ್ಯಂತರಗಳಾಗಿವೆ. ಅದರಾಚೆಗೆ ಹೆಚ್ಚಿನದೇನೂ ಆಗಿಲ್ಲ. ಸಧ್ಯದ ಸ್ಥಿತಿಯಲ್ಲಿ ಆಗುವಂತೆಯೂ ಇಲ್ಲ.